implemented. However, in view of the withdrawal of the writ Petition challenging the Acquisition, the question of absorbing these employees into Karnataka Electricity Board service and extending the pay scales and other service benefits as per the Board service conditions will be immediately be get attended to. The various demands of the employees will also be examined sympathetically.

SRI B. B. SAYANAK.—May I know from the Minister whether he is going to order the Chief Engineer to get their service books and regularise their services?

SRI B. SUBBAYYA SHETTY.—Already the Chief Engineer, North, has been asked to proceed to Nippani and expedite the matter and he has already left Hubli; and also a Board employee is being sent this evening to get hold of the service books etc., to take immediate action in the matter.

MOTION OF THANKS TO THE GOVERNOR'S ADDRESS
(Debates contd.)

†ಶ್ರೀ ಎಚ್.ಎನ್. ನಂಜೇಗೌಡ (ಅರಕಲಗೂಡು).—ಸನ್ಮಾನ್ಯ ಸಭಾಧ್ಯಕ್ಷರೆಯವರೇ ರಾಜ್ಯಪಾಲರ ವಂದನಾ ನಿರ್ಣಯವನ್ನು ಸಮರ್ಥಿಸುತ್ತಾ ಕೆಲವು ಮಾತುಗಳನ್ನು ಹೇಳಬೇಕು ಎಂದು ನಾನು ಅಪೇಕ್ಷೆ ಪಡುತ್ತೇನೆ. ನಮ್ಮ ಸರ್ಕಾರ ಅನೇಕ ಸಾಧನೆಗಳನ್ನು ಮಾಡಿದೆ ಆ ಸಾಧನೆಗಳ ವಿಷಯದಲ್ಲಿ ಹೇಳುತ್ತಾ ಹೋದರೆ ಒಂದು ದೊಡ್ಡ ಪಟ್ಟಿ ಮಾಡಬಹುದು. 5 ವರ್ಷಗಳಿಂದ ಸರ್ಕಾರದವರು ಅನೇಕ ಸಾಧನೆಗಳನ್ನು ಮಾಡಿರುವುದಕ್ಕಾಗಿ ಸ್ಪಷ್ಟವಾದ ಮಹತ್ಸಾಧನೆಯನ್ನು ಚುನಾವಣೆಯಲ್ಲಿ 26 ಸೀಟುಗಳನ್ನು ಕಾಂಗ್ರೆಸ್ಸಿನವರು ಗಳಿಸಿರತಕ್ಕದ್ದು. ವಿರೋಧ ಪಕ್ಷದವರು ಇದನ್ನು ಒಪ್ಪುತ್ತಾರೆಂದು ನಾನು ತಿಳಿದುಕೊಂಡಿದ್ದೇನೆ ನಮ್ಮ ಪಕ್ಷದ ಸರ್ಕಾರ ಬಂದ ಮೇಲೆ ವಿರೋಧ ಪಕ್ಷದ ಸದಸ್ಯರನ್ನೂ ಕೂಡ ಬಹಳ ಆತ್ಮೀಯವಾಗಿ ಕಂಡು ನಮ್ಮ ಪಕ್ಷದ ಶಾಸಕರಿಗಿಂತ ಹೆಚ್ಚಿಗೆ ಮನ್ನಣೆಯನ್ನು ಅವರಿಗೆ ಕೊಟ್ಟು ಅವರು ಬೇಸರ ಪಡದ ರೀತಿಯಲ್ಲಿ ನಮ್ಮ ಮಾನ್ಯ ಮುಖ್ಯ ಮಂತ್ರಿಗಳು ಮತ್ತು ಇತರ ಮಂತ್ರಿಗಳು ನಡೆದುಕೊಂಡಿದ್ದಾರೆ ನಮ್ಮ ಮಂತ್ರಿಗಳ ಔದಾರ್ಯ ಮತ್ತು ಉದಾರತೆಯನ್ನು ವಿರೋಧ ಪಕ್ಷದ ಸದಸ್ಯರು ನೋಡಿ ನಮ್ಮ ಜೊತೆಗೆ ಒಡಿ ಒಡಿ ಬಂದು ಸೇರಿದ್ದಾರೆ, ಇದನ್ನು ನಾವು ಕಂಡಿದ್ದೇವೆ. ಆದ್ದರಿಂದ ವಿರೋಧ ಪಕ್ಷದವರು ಸರ್ಕಾರದ ಮನೋಭಾವ ಮತ್ತು ಮಂತ್ರಿಗಳ ಮನೋಭಾವವನ್ನು ಕುರಿತು ಟೀಕೆ ಮಾಡತಕ್ಕ ಪರಿಸ್ಥಿತಿಯಲ್ಲ ಇಲ್ಲ ಆ ಮಟ್ಟಕ್ಕೆ ನಾವು ಸಾಧನೆಗಳನ್ನು ಮಾಡಿದ್ದೇವೆ ನಾವು ಲೋಕಸಭಾ ಚುನಾವಣೆಯಲ್ಲಿ 26 ಸೀಟುಗಳನ್ನು ಗಳಿಸಿದ್ದರೂ ಕೂಡ ಬಹುಶಃ ಶೇಕಡಾವಾರು ಪ್ರೋಜುಗಳನ್ನು ತೆಗೆದುಕೊಂಡರೆ ಈ ಸಾರಿ ಸ್ವಲ್ಪ ಕಡಿಮೆ. ಹಿಂದೆ ನಾವು ಪಡೆದುಕೊಂಡಷ್ಟು ಇಲ್ಲ, ಈ ದಿಶೆಯಲ್ಲಿ ನಾವು ನಮ್ಮ ಆತ್ಮ ಶೋಧನೆ ಮಾಡಿಕೊಂಡು ಮುಂದುವರಿಯುವುದಕ್ಕೆ ಪ್ರಯತ್ನ ಮಾಡುತ್ತಿದ್ದೇವೆ ಈಗಾಗಲೇ ನಾವು ಸಾಧಿಸಿರತಕ್ಕ ಸಾಧನೆಗಳನ್ನು ಅನೇಕರು ಹೇಳಿದ್ದಾರೆ ನಾವು ಅನೇಕ ಸಾಧನೆಗಳನ್ನು ಸಾಧಿಸಿದ್ದರೂ ಕೂಡ ಇನ್ನೂ ಸಾಧಿಸಬೇಕಾದ್ದು ಅನೇಕ ಇದೆ. ಆ ದಿಶೆಯಲ್ಲಿ ಸೂಚನೆಗಳನ್ನು ಕೊಡುವುದು ಅವಶ್ಯ ಎಂದು ನಾನು ಅಂದುಕೊಂಡಿದ್ದೇನೆ.

ಒಂದನೆಯದಾಗಿ ಶರಾವತಿ ಪ್ರಕರಣ ಬಂದಾಗ್ಗೆ ನಾವು ಸಹ ಚುನಾವಣೆಗೆ ಮುಂಚೆ ಈ ಶರಾವತಿಯ ಕರ್ಮಕಾಂಡವನ್ನು ವಿಚಾರಣೆ ಮಾಡುತ್ತೇವೆ ಎಂದು ಮಹಾ ಜನತೆಗೆ ನಾವು ಭರವಸೆಯನ್ನು ಕೊಟ್ಟಿದ್ದೇವೆ ಇದೇ ಸಭೆಯಲ್ಲಿ ಅನೇಕ ಮುಖ್ಯ ಮಂತ್ರಿಗಳು ಮತ್ತು ಸಂಬಂಧಪಟ್ಟ ಮಂತ್ರಿಗಳು ಶರಾವತಿ ಕರ್ಮಕಾಂಡದ ಬಗ್ಗೆ ವಿಚಾರಣೆ ಮಾಡುತ್ತೇವೆ ಎಂದು ಭರವಸೆಯನ್ನು

ಕೊಟ್ಟಿದ್ದರು ಇವೊತ್ತು ಜನಗಳಿಗೆ ಅನುಮಾನ ಬಂದಿರತಕ್ಕ ವಾತಾವರಣ ಇದೆ. ಶರಾವತಿಯ ಸಮಸ್ಯೆಯನ್ನು ರಾಜಕೀಯಕ್ಕೆ ಬಳಸಿಕೊಂಡರು ಪೋಟು ತೆಗೆದುಕೊಳ್ಳುವ ದೃಷ್ಟಿಯಿಂದ ಅದನ್ನು ವಿಚಾರಣೆ ಮಾಡುತ್ತೇವೆ ಎನ್ನುವ ಭರವಸೆಯನ್ನು ಕೊಟ್ಟು ಸುಮ್ಮನೆ ಆಶೆಯನ್ನು ಹುಟ್ಟಿಸಿ ಅದನ್ನು ಹಾಗೆಯೇ ಸುಮ್ಮನೆಬಿಟ್ಟರು ಎನ್ನುವ ಅನುಮಾನ ಕೆಲವು ಕಡೆ ಜನತೆಗೆ ಬಂದಿದೆ ಸರ್ಕಾರದ ಮಂತ್ರಿಗಳಾಗಿರತಕ್ಕವರು ಯಾರೋ ಇದರಲ್ಲಿ ಪಾಲುದಾರರು ಇದ್ದಾರೆ ಅದ್ದರಿಂದ ಇದನ್ನು ವಿಚಾರಣೆ ಮಾಡಿದರೆ ಅವರು ಇದರಲ್ಲಿ ಸಿಕ್ಕಿ ಹಾಕಿಕೊಳ್ಳುತ್ತಾರೆ ಎನ್ನುವ ಭೀತಿಯಿಂ ಈ ಶರಾವತಿ ಪ್ರಕರಣವನ್ನು ವಿಚಾರಣೆ ನಡೆಸದೆ ಹಾಗೆಯೇ ಬಿಟ್ಟಿದ್ದಾರೆ ಎನ್ನುವ ಅನುಮಾನ ಕೆಲವರಲ್ಲಿ ಬಂದಿದೆ

1-30 P.M.

ಮತ್ತೊಂದು ವಿಚಾರ ಏನೆಂದರೆ, ಅವರು ಹೇಳಿದ್ದರಲ್ಲಿ ಹುರುಳಿಲ್ಲವೇನೋ ವಿರೋಧಪಕ್ಷ ದವರು ಕೇಳತಕ್ಕ, ಹೇಳತಕ್ಕ ಮಾತು, ಮಂತ್ರಿಗಳು, ಮುಖ್ಯ ಮಂತ್ರಿಗಳು ಜನಾವಣೆಗೆ ಮುಂಚೆ ಕೊಟ್ಟಂಥ ಭರವಸೆಗಳಲ್ಲಿ ಅಂಕಿ ಅಂಶಗಳ ಆಧಾರವಿಲ್ಲದೆ ಏನೋ ಆಗಿದೆ ಎಂದು ಜನಾಭಿಪ್ರಾಯ ರೂಪಿಸುವುದಕ್ಕೆ ಪ್ರಯತ್ನ ಪಟ್ಟರೋ ಎನ್ನುವ ಅಭಿಪ್ರಾಯಕ್ಕೆ ಬಂದಿದೆ. ಆದುದರಿಂದ ಈ ವಿಷಯಕ್ಕೆ ವಿರಾಮ ಹಾಕತಕ್ಕಂಥಾದ್ದು ಭಾರಿ ಅವಶ್ಯಕ. ಸರ್ಕಾರದ ವತಿಯಿಂದ ಜನಗಳಿಗೆ ಸರಿಯಾಗಿ ತಿಳುವಳಿಕೆ ನೀಡಿ, ಈ ಪ್ರಕರಣದಲ್ಲಿ ಏನೂ ಇಲ್ಲದೇ ಹೋದರೆ ಶ್ರೀಮಾನ್ ವಿರೇಂದ್ರ ಪಾಟೀಲರಾಗಲೀ, ನಿಜಲಿಂಗಪ್ಪನವರಾಗಲೀ ಅಪರಾಧಿಗಳಲ್ಲ ಎಂದು ಇದ್ದರೆ, ಏನೂ ಇಲ್ಲ ಎಂದು ವಿರಾಮ ಹಾಕಬೇಕು ಇನ್ನೊಂದು ಪಕ್ಷ, ಯಾರೇ ಇರಲಿ, ಈ ಪ್ರಕರಣದಲ್ಲಿ ಏನಾದರೂ ಅಪರಾಧ ನಡೆದಿದ್ದರೆ, ಸರ್ಕಾರದ ಬೊಕ್ಕಸಕ್ಕೆ ನಷ್ಟವಾಗಿದ್ದರೆ ಅದರ ಬಗ್ಗೆ ವಿಚಾರಣೆ ನಡೆಸಬೇಕಾದುದು ಅವಶ್ಯಕ. ಶ್ರೀಮಾನ್ ಬಂಗಾರಪ್ಪನವರು ಇದರ ಬಗ್ಗೆ ಪ್ರಸ್ತಾಪ ಮಾಡಿದ್ದಾರೆ ಪದೇ ಪದೇ ಇದರ ಬಗ್ಗೆ ಮಾತನಾಡಿ ಇದರಲ್ಲಿ ಭಾರಿ ಅಗಬಾರದ್ದು ಏನೋ ಆಗಿಹೋಗಿದೆ ಎನ್ನುವ ಮಟ್ಟಕ್ಕೆ ಹೋಗಬಾರದು ಎನ್ನುವುದು ನನ್ನ ಸಲಹೆ ಇದಕ್ಕೆ ವಿರಾಮ ಹಾಕುವ ದೃಷ್ಟಿಯಿಂದ ಈ ಸಮಸ್ಯೆ ಬಗೆಹರಿಯಲೇಬೇಕು ಇದರಲ್ಲಿ ಏನಾದರೂ ತಪ್ಪುಗಳು ಇದ್ದರೆ, ಅಂಕಿಅಂಶಗಳ ಆಧಾರದ ಮೇಲೆ ಆಗಬಾರದ್ದು ಆಗಿದೆಯೆಂದರೆ, ಸಭೆಗೆ ಭರವಸೆ ಕೊಟ್ಟಂತೆ ವಿಚಾರಣೆ ಮಾಡುವುದು ಅವಶ್ಯಕ ಇದರಲ್ಲಿ ಯಾರೂ ಅಪರಾಧ ಮಾಡಿಲ್ಲ, ಶ್ರೀಮಾನ್ ಚನ್ನಬಸಪ್ಪನವರಾಗಲೀ ಶ್ರೀಮಾನ್ ನಿಜಲಿಂಗಪ್ಪ ನವರಾಗಲೀ ಯಾರೂ ಅಪರಾಧ ಮಾಡಿಲ್ಲ ಎಂದು ಇದ್ದರೆ, ಇದರಲ್ಲಿ ಏನೂ ಇಲ್ಲ, ಇದನ್ನು ಮುಗಿಸಿದ್ದೇವೆ ಎಂದು ದೇಶಕ್ಕೆ ತಿಳಿಸಬೇಕು ಎಂದು ಸೂಚನೆಯನ್ನು ಕೊಡುವುದಕ್ಕೆ ಈ ಸಂದರ್ಭ ದಲ್ಲಿ ಇಷ್ಟಪಡುತ್ತೇನೆ. ಸಾಮಾನ್ಯವಾಗಿ ಆಡಳಿತದಲ್ಲಿ ಸಾಧನೆಗಳನ್ನು ಮಾಡಿಕೊಂಡು ಹೋಗುತ್ತೇವೆ ಆದರೆ ಇರತಕ್ಕ ಲೋಪದೋಷಗಳ ಬಗ್ಗೆ ಸೂಚನೆ ಕೊಡಬೇಕೂ ಎನ್ನುವುದು ನನ್ನ ಉದ್ದೇಶ ಇವತ್ತಿನ ದಿವಸ ನಮ್ಮ ವಿಧಾನಸೌಧದಿಂದ ಹಿಡಿದು ತಾಲ್ಲೂಕು ಆಫೀಸಿನವರೆಗೆ ನಿಧಾನ ಪ್ರವೃತ್ತಿ ಬೆಳೆದುಕೊಂಡು ಬಂದಿದೆ ನಮ್ಮ ಸರ್ಕಾರ ಬಂದ ನಂತರ ಅಧಿಕಾರಶಾಹಿ ಮನೋ ಭಾವ ದೊಡ್ಡ ಹೆಮ್ಮಾರವಾಗಿ ಬೆಳೆದಿದೆ. ಮಂತ್ರಿಗಳು ಮಿನಿಟ್ಸ್ ಹಾಕಿ ಯಾವುದಾದರೂ ಅರ್ಜಿ ಮೇಲೆ ಹುಕುಂ ಬರೆದರೆ ಅದು ವಿಧಾನಸೌಧ ಬಿಡಬೇಕಾದರೆ 3 ತಿಂಗಳಾಗುತ್ತದೆ ಇವತ್ತು ಒಂದು ಆರ್ಡರ್ ಮಾಡಿದರೆ ಅದು ಸ್ವಾಭಾವಿಕವಾಗಿ ನಡೆಯುವುದಿಲ್ಲ ಆ ಹುಕುಂ ಸೆಕ್ಷನ್ ಆಫೀಸರಿಯಿಂದ ಡೆಪ್ಯುಟಿ ಸೆಕ್ರೆಟರಿ, ಅಮೇಲೆ ಅಂಡರ್ ಸೆಕ್ರೆಟರಿಗೆ ಹೋಗಿ ಸೆಕ್ಷನ್ ತಲುಪಿ ಇಷ್ಯೂ ಆಗಬೇಕಾದರೆ ಸ್ವಾಭಾವಿಕವಾಗಿ ಆಗುವ ಮಟ್ಟವೇ ಇಲ್ಲ. ಜಾಗ್ರತೆ ರಿಲೀಫ್ ಪಡೆಯಬೇಕು ಎಂದು ಜನ ಅರ್ಜಿ ಕೊಟ್ಟರೆ, ಪ್ರತಿಯೊಂದು ಹಂತದಲ್ಲೂ ತಿಂಗಳುಗಟ್ಟಲೆ ತಲುಪುವ ಮಟ್ಟಕ್ಕೆ ಅಧಿಕಾರಶಾಹಿ ಮನೋ ಭಾವ ಬೆಳೆದಿದೆ ಎಂದರೆ ಅದನ್ನು ತರದೂದು ಮಾಡಬೇಕು.

ಸೆಕ್ರೆಟರಿಯೇಟಿನಲ್ಲಿ ರೂಲ್ಸ್ ಮಾಡಿ ಕಾಗದ ವಿಲೇವಾರಿ ಮಾಡಿದ ಮೇಲೆ 3 ದಿವಸಗಳೊಳಗಾದರೂ ಸಂಬಂಧಪಟ್ಟವರಿಗೆ ತಲುಪುವಂತೆ ವ್ಯವಸ್ಥೆಗೊಳಿಸಬೇಕು ಎಂದು ತಮ್ಮ ಮೂಲಕ ಸರ್ಕಾರವನ್ನು ಪ್ರಾರ್ಥನೆ ಮಾಡುತ್ತೇನೆ ಕೆಲವು ಅಧಿಕಾರಿಗಳ ಮನೋಧರ್ಮವನ್ನು ನೋಡಿದಾಗ ಗೂಟಮಾಡಬೇಕು ಎಂದರೂ ಶಿಫಾರಸು ಮಾಡಬೇಕೋ ಏನೋ ಎಂದು ನನಗನ್ನಿಸುತ್ತದೆ ಒಬ್ಬ ಅಧಿಕಾರಿಗೆ ಅರ್ಜಿ ಕೊಟ್ಟರೆ ಆ ಅರ್ಜಿ ಆಧಾರವ ಮೇಲೆ ತೀರ್ಮಾನ ತೆಗೆದುಕೊಳ್ಳುವುದು

ಕನಸಾಗಿದೆ ಇದರ ಬಗ್ಗೆ ಶಾಸಕರಿಗೆ ಹೇಳಬೇಕು, ಮತ್ತೊಬ್ಬರಿಗೆ ಹೇಳಬೇಕು, ಯಾರದಾದರೂ ಒತ್ತಾಯ ತಂದರೆ ಮಾತ್ರ ಕೆಲಸ ಆಗುತ್ತದೆ, ಇಲ್ಲದೇ ಹೋದರೆ ಯಾವ ಕೆಲಸವೂ ಆಗುವುದಿಲ್ಲ. ಕೆಲವಾರು ಸಂದರ್ಭಗಳಲ್ಲಿ ಶಾಸಕರು ನನಗೆ ಹೇಳಿದ್ದಾರೆ ಶಾಸಕರಿಗೆ ಮನ್ನಣೆ ಕೊಡದೇ ಇರ ತಕ್ಕಂಥ ಅಧಿಕಾರಿಗಳನ್ನು ತುಂಬಾ ಹೆಚ್ಚುಕಂಡಿದ್ದೇನೆ ಅಧಿಕಾರಶಾಹಿ ಮನೋಭಾವವನ್ನು ತಡೆ ಹಿಡಿಯಬೇಕು ಮಂತ್ರಿಗಳ ಅನಾದರಣೆಯಿಂದ ಈ ಒಂದು ಖಾಯಿಲೆ ಬಂತೋ ಏನೋ ಗೊತ್ತಿಲ್ಲ. ಶಾಸಕರೂ ಹೇಳಿದರೂ ಸಾರ್ವಜನಿಕರ ಅಹವಾಲನ್ನು ಕಂದರೆ ಅನಾದರಣೆ ಮಾಡುವ ಮಟ್ಟಕ್ಕೆ ಅಧಿಕಾರಶಾಹಿ ಜನ ಬಂದು ತಲುಪಿದ್ದಾರೆ ಎಂದರೆ ಬಹಳ ಶೋಚನೀಯ ಈ ಖಾಯಿಲೆಗೆ ಚಿಕಿತ್ಸೆ ನಡೆಸದೇ ಹೋದರೆ ಸರ್ಕಾರ ಏನೇ ಕಾನೂನು ಮಾಡಿ, ದೀನದಲಿತರಿಗೆ ದರಿದ್ರ ವರ್ಗದವರನ್ನು ಉದ್ಧಾರ ಮಾಡುತ್ತೇವೆ ಎನ್ನುವುದೆಲ್ಲಾ ಬರೀ ಕನಸಾಗುತ್ತದೆ ಇದು ನನಸಾಗಬೇಕಾದರೆ ಅಧಿಕಾರಶಾಹಿ, ನೌಕರಶಾಹಿ ಜನ ಏನಿದ್ದಾರೆ ಅವರು ಚುರುಕಾಗಿ ತಮಗೆ ತಾವೇ ಕಲಸಮಾಡ ತಕ್ಕಂಥ ಚಿಕಿತ್ಸೆಯನ್ನು ಶುರು ಮಾಡಬೇಕು ಎಂದು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಷ್ಟ ಪಡುತ್ತೇನೆ. ಇದಕ್ಕೆ ಕಾರಣ ಏನೆಂದರೆ ನಮಗೆ ಮೂಲಭೂತವಾದ ಹಕ್ಕಿದೆ ನಮ್ಮ ದೇಶದಲ್ಲಿ ಕೆಲವಾರು ಕಡೆ ಬರ ಬಂದಿತ್ತು ಸೊನ್ನೆಶೈಟ ಸಾಲದ ವಸೂಲಾತಿಯನ್ನು ನಿಲುಗಡೆ ಮಾಡಬೇಕು ಎಂದು ಅರ್ಜಿ ಕೊಟ್ಟರೆ ಅವರು ಪರಿಶೀಲಿಸುವುದಿಲ್ಲ ಮಳೆ ಇಲ್ಲದೇ ಹೋದರೂ ಪಾಟ್ರ್ ರೇಟ್ ವಸೂಲಿ ಮಾಡುತ್ತಾರೆ ಬೆಳೆ ಇಲ್ಲದೇ ಹೋದರೂ ಕಂದಾಯವನ್ನು ವಸೂಲಿ ಮಾಡುತ್ತಾರೆ ಕೆಳಮಟ್ಟದಲ್ಲಿರತಕ್ಕ ಅಧಿಕಾರ ವರ್ಗದವರ ಮೇಲೆ ಬೇರೆಯವರಿಂದ ಒತ್ತಾಯ ತಂದರೆ ಆಗ ಮಳೆ ಬಂದಿದೆ ಅಥವಾ ಇಲ್ಲ ಎನ್ನುವುದನ್ನು ತಿಳಿದುಕೊಳ್ಳುತ್ತಾರೆ ಇದು ಬಹಳ ವಿಷಾದಕರವಾದ ಸಂಗತಿ ಆದ್ದರಿಂದ ಈ ಖಾಯಿಲೆಗೆ ಏನಾದರೂ ಕೂಡಲೇ ಚಿಕಿತ್ಸೆಯನ್ನು ಮಾಡಲೇಬೇಕು ಎಂದು ತಮ್ಮ ಮೂಲಕ ಸರ್ಕಾರಕ್ಕೆ ಸೂಚನೆ ಕೊಡಬಯಸುತ್ತೇನೆ ಈ ಅಧಿಕಾರಿಗಳಲ್ಲಿ ಏನಾಗಿದೆಯೆಂದರೆ ರೂಲ್2ಕರಪ್ರಕಾರ ಕಂಪಲ್ಸರಿ ರಿಟೈರ್‌ಮೆಂಟ್ ಮಾಡಿ ವಿಚಾರಣೆ ಇಲ್ಲದೆ, ಮನಸ್ಸೋ ಇಚ್ಛೆ ಮನೆಗೆ ಕಳಿಸಕ್ಕೆ ಪ್ರವೃತ್ತಿ ಏನಿದೆ ಅದಾ ಹಿಂದೆ ಎಲ್ಲೂ ಆಗಿರಲಿಲ್ಲ ಇತ್ತೀಚೆಗೆ ಒಳ್ಳೊಳ್ಳೆಯ ಅಧಿಕಾರಗಳನ್ನು ಮನೆಗೆ ಕಳಿಸಿದ್ದಾರೆ, ಶಿಸ್ತಿನ ಕ್ರಮ ಕೈಗೊಳ್ಳುವುದಕ್ಕೆ ಇನ್‌ಕ್ರಿಮೆಂಟ್ ನಿಲ್ಲಿಸುವುದು ಮುಂತಾದ ಕ್ರಮಗಳಿವೆ ಇದರ ಜೊತೆಗೆ ರೂಲ್ 8ಕರ ಪ್ರಕಾರ ಏನು ಕ್ರಮ ತೆಗೆದುಕೊಳ್ಳುತ್ತಾರೋ ಅದರ ದುರುಪಯೋಗ ಆಗುತ್ತದೇನೋ ಎನ್ನುವ ಅನುಮಾನ ಇದೆ ಅದುದರಿಂದ ಹೊಡಲು ಇದ್ದಹಾಗೆ ಇದ್ದರೆ ಸಾಕು ಇವರ ಕೈಯಲ್ಲಿ ಅಧಿಕಾರ ಕೊಡುವ ಅವಶ್ಯಕತೆ ಇಲ್ಲ. ಇವರಲ್ಲಿ ಬಡವರೂ ಇದ್ದಾರೆ ಆದ್ದರಿಂದ ಇದರ ಬಗ್ಗೆ ವಿಚಾರಣೆ ಮಾಡಬೇಕು. ನಮ್ಮ ಸೆಕ್ರೆಟರಿಯೇಟಿನಲ್ಲಿ ಬ್ರಾಹ್ಮಿನ್ ನಾನ್ ಬ್ರಾಹ್ಮಿನ್‌ಗೂ ಅಕ್ಷರಸ್ಥರಿಗೂ ಅನಕ್ಷರಸ್ಥರಿಗೂ ಕುಸ್ತಿಗಳ ತರಹ ನಡೆಯುವ ಪರಿಸ್ಥಿತಿ ಬಂತು. ಮಂತ್ರಿಗಳನ್ನು ಮೀರಿ ರಾಜ್ಯಪಾಲರನ್ನು ನಮ್ಮನ್ನು ನೋಡಕಕ್ಕೆ ಚಟಗಳು ಇವೆ ಇದು ಎಷ್ಟು ಹಿತವಾಗಿದೆ ಎನ್ನುವುದು ಇದರಿಂದ ಗೊತ್ತಾಗುತ್ತದೆ ಶ್ರೀಮಾನ್ ದೇವೇಗೌಡರು ಮಾತನಾಡುತ್ತಾ ಬಹಳ ವಿಚಾರಗಳನ್ನು ಹೇಳಿದ್ದಾರೆ ಇವತ್ತು ಕೇಂದ್ರಸರ್ಕಾರ ಇವತ್ತು ಸಾರ್ವಜನಿಕರ ಜೀವನವನ್ನು ಅನೇಕ ವರ್ಷಗಳ ಕಾಲ ಅರಿತು ಚುನಾವಣೆ ಮಾಡಿ ಜನಗಳ ಕಷ್ಟಸುಖಗಳನ್ನು ಅರಿತು ಅವರನ್ನು ಪ್ರತಿ ನಿಧಿಸಿ ಕೆಲಸ ಮಾಡುವುದು ಒಂದು ರೀತಿ ಇವತ್ತು ಸರ್ಕಾರದ ಸವಲತ್ತನ್ನು ಸಂಬಳವನ್ನು ಪಡೆದು ಸರ್ಕಾರದ ಸೌಲಭ್ಯವನ್ನು ಪಡೆದು ಜೀವನಮಾಡಿ. ಮಕ್ಕಳು ಮೊಮ್ಮಕ್ಕಳ ವಿದ್ಯಾಭ್ಯಾಸ ಮಾಡಿಸಿ, ರಿಟೈರ್ ಆದಮೇಲೆ ರಾಜಕೀಯಕ್ಕೆ ಬರುತ್ತಾರೆ ಅದನ್ನು ತಪ್ಪಿಸುವುದಕ್ಕೆ ರಾಷ್ಟ್ರಾಂಗ ತಿದ್ದುಪಡಿ ಮಾಡಬೇಕು ಕೊನೇ ಪಕ್ಷ ಗೆಜೆಟೆಡ್ ಅಧಿಕಾರಿಗಳು ರಿಟೈರ್ ಆದವರು ಚುನಾವಣೆಯಲ್ಲಿ ಬರುವಂಥ ರೀತಿಯಲ್ಲಿ ರಾಜ್ಯಾಂಗ ತಿದ್ದುಪಡಿ ಮಾಡುವುದು ಒಳ್ಳೆಯದು ಎಂದು ಈ ಸಂದರ್ಭದಲ್ಲಿ ತಿಳಿಸುವುದಕ್ಕೆ ಇಷ್ಟಪಡುತ್ತೇನೆ.

ದೇಶದಲ್ಲಿ ಶ್ರೀಮತಿ ಇಂದಿರಾಗಾಂಧಿಯವರ ನಾಯಕತ್ವದಲ್ಲಿ ದರಿದ್ರವರ್ಗದವರಿಗೂ ದುಂಡು ವರ್ಗದವರಿಗೂ ಯುದ್ಧ ಪ್ರಾರಂಭವಾಯಿತು ದರಿದ್ರರು ಕಷ್ಟಪಟ್ಟು ಸುರಿಸತಕ್ಕ ಬೆವರಿಗೆ ಬೆಲೆ ಕೊಡಬೇಕು ಎನ್ನುವ ದೃಷ್ಟಿಯಲ್ಲಿ ಅನೇಕ ಕಾರ್ಯಕ್ರಮಗಳು ಪ್ರಾರಂಭವಾಯಿತು ನಮ್ಮ ರಾಜ್ಯದಲ್ಲಿ ಪ್ರಗತಿಪರವಾದ ಕಾನೂನುಗಳನ್ನು ಮಾಡಿದ್ದೇವೆ ದರಿದ್ರ ಜನರಿಗೆ ದೀನ ದಲಿತರಿಗೆ, ಹರಿಜನ-ಗಿರಿಜನರಿಗೆ ಮುಂದೆಯೂ ಕೂಡ ಸೌಲಭ್ಯವನ್ನು ಒದಗಿಸಬೇಕಾಗಿದೆ ಸಮಗ್ರ ಆಗು ಹೋಗುಗಳನ್ನು ಪರಿಶೀಲಿಸಿ ಕಾನೂನು ಕಟ್ಟಲೆ ಆಯಿತೋ ಗೊತ್ತಿಲ್ಲ ಇದಕ್ಕೆ ಅನೇಕ ಎಡರುತೊಡರು

ಗಳು ಬಂದುವು ನಿರಪರಾಧಿಗಳಿಗೆ ತೊಂದರೆಯಾಗಿರತಕ್ಕ ಕೆಲವು ಕಾನೂನುಗಳನ್ನು ಮಾಡಿದ್ದೇವೆ. ಈ ಕಾನೂನುಗಳಿಗೆ ಅಮೆಂಡ್‌ಮೆಂಟ್‌ನ್ನು ಮಾಡಿಕೊಂಡು ಅನುಕೂಲಗಳಾಗತಕ್ಕ ರೀತಿ ಕಾನೂನು ಗಳನ್ನು ಮಾಡುವುದು ಅವಶ್ಯಕ ಎಂದು ಸೂಚನೆ ಕೊಡಬಯಸುತ್ತೇನೆ.

ಕೆಲವು ಉದಾಹರಣೆಗಳನ್ನು ಹೇಳುವುದಾದರೆ ಈಗ ಗ್ರಾಮಾಂತರ ಋಣಬಾಧೆ ತಪ್ಪಿಸ ಬೇಕೆಂಬ ಬಗ್ಗೆ ಕಾಯಿದೆಯನ್ನು ಜಾರಿಗೆ ತಂದಿರುವುದು. ಅದರಂತೆ ಲೈಸೆನ್ಸ್ ತೆಗೆದುಕೊಳ್ಳದೆ ಇರತಕ್ಕ ಶ್ರೀಮಂತರ ಹತ್ತಿರ ಯಾರ್ಯಾರು ಬಡವರು ಲೇವಾದೇವಿ ಸಾಲಗಳನ್ನು ಪಡೆದಿದ್ದಾರೋ ಅದನ್ನು ಪುನಃ ಅವರಿಗೆ ವಾಪಸ್ಸು ಕೊಡುವ ಹಾಗೆ ಇಲ್ಲವೆಂಬ ಬಗ್ಗೆ ಒಂದು ಕಾನೂನು ಮಾಡಿದೆ. ದರಿದ್ರರು ಯಾರು, ದುಂದು ವರ್ಗದವರು, ಯಾರು ಶ್ರೀಮಂತರು ಯಾವ ಬಡವರು ಯಾರು ಎಂಬ ಏನೊಂದೂ ವರ್ಗೀಕರಣವಿಲ್ಲದೆ ಏಕಾಏಕಿ ಒಂದು ಕಾನೂನನ್ನು ಮಾಡಿದ್ದಾರೆಂದು ಹೇಳಿದರೆ ಅದೇನೂ ತಪ್ಪಾಗಲಾರದು. ಬಡವರನ್ನು ಉದ್ಧಾರ ಮಾಡುವುದಕ್ಕೋಸ್ಕರವೇ ನಾನಾ ಕಾನೂನು ಗಳನ್ನು ಮಾಡಲಾಗಿದೆಯೆಂದು ಹೇಳುತ್ತಿದ್ದೇವೆ. ಹಳ್ಳಿಗಾಡಿನಲ್ಲಿರತಕ್ಕಂಥ ಬಡವರಿಗೆ ಶ್ರೀಮಂತರು ಈಗ ಸಾಲ ಕೊಡುವುದಿಲ್ಲ. ಅದಕ್ಕೆ ಶ್ರೀಮಂತ ವರ್ಗದವರೇ ಗ್ಯಾರಂಟಿ ಕೊಡಬೇಕಾಗಿದೆ. ಈಗ ಮಾಡಿರತಕ್ಕಂಥ ಕಾನೂನುಗಳಲ್ಲಿ ಎಕ್ಸೆಪ್ಷನ್ನೇ ಇಲ್ಲ. ಸುಮ್ಮನೇ ಮಕ್ಕಿಕಾ ಮಕ್ಕಿಯಾಗಿ ಕಾನೂನುಗಳು ರಚನೆಯಾಗಿವೆ. ಈಗ ಬಡವರಿಂದ ಸಾಲವನ್ನು ಸುಲಿಗೆ ಮಾಡಿ ಶ್ರೀಮಂತರು ಸುಖವಾಗಿ ಉಳಿದುಕೊಂಡಿದ್ದಾರೆ. ಇದರಿಂದ ಬಡವರಿಗೆ ಅನುಕೂಲವಾಗಿದೆಯೋ ಅನಾನುಕೂಲ ವಾಗಿದೆಯೋ ಎಂಬುದನ್ನು ಯೋಚನೆ ಮಾಡಿಲ್ಲ. ಬಡವರಿಗೆ ಅನುಕೂಲ ಮಾಡುವ ದೃಷ್ಟಿಯಿಂದ ಹೊರಟರೂ ಶ್ರೀಮಂತರಿಗೆ ಅನುಕೂಲವಾಗಿದೆ. ಇವತ್ತು ಹಳ್ಳಿಗಾಡಿನಲ್ಲಿರತಕ್ಕ ಹರಿಜನರ ಸಂಕಟ ಹೇಳತೀರದಾಗಿದೆ. ಇವತ್ತು ಸರ್ಕಾರ 100 ಒಳ್ಳೆಯದನ್ನು ಮಾಡಿದರೆ ಆದು ಲೆಕ್ಕಕ್ಕೆ ಬರುವುದಿಲ್ಲ. ಒಂದೇ ಒಂದು ಕೆಟ್ಟದ್ದು ಮಾಡಿದರೆ ಅದು ನೆನಪಿಗೆ ಬರುತ್ತದೆ. ಅದೇ ರೀತಿ ಯಾರಾದರೂ ಮಕ್ಕಳಿಗೆ ಒಳ್ಳೆಯ ಮಿಠಾಯಿ, ಹಾಲು ಅನ್ನ ಕೊಟ್ಟರೆ ಅದು ನೆನಪಿಗೆ ಬರುವುದಿಲ್ಲ. ಅದನ್ನು ನೆನೆಸುವುದಿಲ್ಲ. ಆದರೆ, ಅವರೇ ಮಕ್ಕಳ ಎದೆಗೆ ಒದ್ದರೆ ಆಗ ಜಗಳಕ್ಕೆ ನಿಂತುಕೊಳ್ಳುತ್ತಾರೆ. ಅದರಲ್ಲೂ ಒಂದು ಕಿಂಚಿತ್ ನಷ್ಟ ಮಾಡಿದರೆ ಸಾಕು, ಆಗಲೇ ಸರ್ಕಾರದ ಮೇಲೆ ಅಪಪ್ರಚಾರ ಮಾಡುವಂಥ ವ್ಯವಸ್ಥೆಯಾಗಿದೆ. ಇವತ್ತು ಈಗಿನ ಈ ಒಂದು ಕಾನೂನು ಜಾರಿಯಿಂದ ಕೆಲವು ಕಡೆ ಸಣ್ಣ ಪುಟ್ಟದ್ದಕ್ಕೂ ಸಾಲ ಸಿಗುವುದು ಬಹಳ ಕಷ್ಟವಾಗಿದೆ. ಯಾರೂ ಸಾಲ ಕೊಡುತ್ತಿಲ್ಲ. ತೀರಾ ಗರೀಬು ಆದರೂ ಅವನಿಗೆ 10–15 ರೂಪಾಯಿಗಳಷ್ಟು ಸಾಲ ಹುಟ್ಟುವುದೂ ದುಸ್ತರ ವಾಗಿದೆ. ಅವನ ಹೆಂಡತಿ ಮಕ್ಕಳ ಕಾಯಿಲೆಯಿಂದ ಆಸ್ಪತ್ರೆಗೆ ಹೋಗಬೇಕೆಂದರೂ ಒಂದು ಕಾನೂ ನಷ್ಟ ಎಲ್ಲಿಯೂ ಹುಟ್ಟದಂತಹ ಪರಿಸ್ಥಿತಿ ಈಗ ಬಂದಿದೆ. ಹಳೆಯದನ್ನು ತೆಗೆದುಹಾಕಿ ಹೊಸದಾಗಿ ಒಂದು ಕಾನೂನನ್ನು ತರುವ ಕಾಲದಲ್ಲಿ ಹಳ್ಳಿಗಾಡಿನ ಜನರಿಗೆ ಬದಲಿ ವ್ಯವಸ್ಥೆ ಮಾಡಬೇಕಾದುದು ಬಹಳ ಅವಶ್ಯಕ. ಶ್ರೀಮಾನ್ ಕೆ. ಎಚ್. ರಂಗನಾಥ್‌ರವರು ಗ್ರಾಮಾಂತರದಲ್ಲಿರತಕ್ಕ ಎಲ್ಲ ಬಡ ಜನರಿಗೂ ಸಾಲ ಸೌಲಭ್ಯಗಳನ್ನು ಒದಗಿಸಿ ಸಹಾಯ ಮಾಡಲು ಸುಮಾರು 200 ಕೋಟಿ ರೂಪಾಯಿ ಗಳು ಬೇಕಾಗುತ್ತದೆಂದು ಹಿಂದೆ ಒಂದು ಹೇಳಿಕೆ ಕೊಟ್ಟಿರುವುದನ್ನು ನಾನು ಓದಿದ್ದೇನೆ. ಹಣ ವನ್ನು ಯಾವ ರೀತಿ ವ್ಯವಸ್ಥೆ ಮಾಡುತ್ತಾರೆಂಬುದು ಮುಖ್ಯವಲ್ಲ ಈಗ ಗ್ರಾಮಾಂತರ ಪ್ರದೇಶ ಗಳಲ್ಲಿ ಅನೇಕ ಬ್ಯಾಂಕುಗಳು ಇದ್ದರೂ ಕೂಡ ಆ ಪ್ರದೇಶದಲ್ಲಿರತಕ್ಕ ದೊಡ್ಡವರು ಹಾಗೂ ಶ್ರೀಮಂತರು ಯಾರಿದ್ದಾರೋ ಅವರಿಗೇ ಸಹಾಯ ಮಾಡುವುದಾಗಿದೆ. ಶ್ರೀಮಂತ ವರ್ಗದವರೇ ಬಡವರಿಗೆ ಜಾಮೀನು ಕೊಡಬೇಕಾಗಿದೆ. ಇಂತಹ ಪರಿಸ್ಥಿತಿ ಇದೆ. ಈ ಒಂದು ವ್ಯವಸ್ಥೆಯನ್ನು ತಪ್ಪಿಸಿ ಏನಾದರೂ ಬೇರೆ ವ್ಯವಸ್ಥೆ ಮಾಡದೇ ಹೋದರೆ ತಬ್ಬಲಿಯಾದ ಜನಗಳಿಗೆ ತೊಂದರೆ ಜಾಸ್ತಿ ಯಾಗುತ್ತದೆ. ಆದ್ದರಿಂದ ತಬ್ಬಲಿ ಜನಗಳಿಗೆ ಅನುಕೂಲವಾಗುವಂತಹ ರೀತಿಯಲ್ಲಿ ಕಾನೂನು ಗಳನ್ನು ರಚನೆ ಮಾಡಿ ಜಾರಿ ಮಾಡಬೇಕು. ಕೆಲವಾರು ಸಂದರ್ಭಗಳಲ್ಲಿ ಬಡವರೇ ಶ್ರೀಮಂತ ವರ್ಗಕ್ಕೆ ಹಣ ಕೊಟ್ಟಿರುವುದು ಇದೆ. ಬಡವರು ಅವರ ಹಣವನ್ನು ಶ್ರೀಮಂತರಿಂದ ವಸೂಲು ಮಾಡುವಾಗ ಮಾನವೀಯ ದೃಷ್ಟಿಯಿಂದ ವಸೂಲು ಮಾಡುವುದು ಅವಶ್ಯಕವೆಂದು ನಾನು ಹೇಳು ತ್ತೇನೆ

ಇನ್ನು ಭೂಸುಧಾರಣಾ ಕಾನೂನನ್ನು ಈ ರಾಜ್ಯದಲ್ಲಿ ಜಾರಿಗೆ ತಂದಂತಹ ಕಾಲದಲ್ಲಿ ಉಳುವವನೇ ಭೂಮಿ ಒಡೆಯ, ಬೆವರು ಸುರಿಸಿದವರಿಗೇ ಭೂಮಿ ಕೊಡಬೇಕೆಂಬ ತತ್ವವನ್ನು ಅನುಸರಿಸುತ್ತಿದ್ದೇವೆ. ಆದರಲ್ಲೂ ಕೂಡ, ವಿನಾಯಿತಿ ಕೊಡಬೇಕು, ಯಾರಿಗೆ ಅಂದರೆ ಬಹ

ಮುಖ್ಯವಾಗಿ ವಿಧವೆಯರಿಗೆ, ಕಳೆದ ಲೋಕಸಭಾ ಚುನಾವಣೆಯ ಸಮಯದಲ್ಲಿ ಚುನಾವಣಾ ಪ್ರಸಾರ ಕ್ಕಾಗಿ ಒಂದು ಕಡೆ ನಾನು ಹೋದಾಗ ಒಬ್ಬ ವಿಧವೆ ನನ್ನಲ್ಲಿಗೆ ಬಂದಾಗ ಅವರಿಗೆ ಸಮಾಧಾನ ಹೇಳುವುದೇ ನನಗೆ ಬಹಳ ಕಷ್ಟವಾಯಿತು. ಅವರಿಗೆ 11 ಜನ ಮಕ್ಕಳು ಇನ್ನೊಂದಾಗಿದ್ದರೆ ಒಂದು ಡಜನ್ ಆಗುತ್ತಿತ್ತು. ಅವರಿಗೆ ಇದ್ದಂತಹ 4 ಎಕರೆ ಜಮೀನನ್ನು ಸಹ ಹೋಯಿತು ಆ 4 ಎಕರೆ ಜಮೀನನ್ನು ಈಗ ಅಲ್ಲಿನ ಒಬ್ಬ ಶ್ರೀಮಂತರೇ ಇಟ್ಟುಕೊಂಡಿದ್ದಾರೆ. ಅದನ್ನು ಅವರಿಂದ ಬಿಡಿಸಿ ಆ ವಿಧವೆಗೆ ಕೊಟ್ಟಿದ್ದೀರಾ ? ಈ ಸಂದರ್ಭದಲ್ಲಿ ನಾನು ಒಂದು ಸೂಚನೆ ಕೊಡುತ್ತೇನೆ. ಇಂತಹವರ ಬಗ್ಗೆ ಸರಿಯಾದ ಕಾನೂನು ಇಲ್ಲದೇ ಹೋದರೆ ಬಹಳ ಕಷ್ಟವಾಗುತ್ತದೆ. ಭೂಸುಧಾರಣಾ ಕಾನೂನಿನಲ್ಲಿ ಉಳುವವನೇ ಭೂಮಿ ಒಡೆಯ ಎಂದು ಹೇಳುವಾಗ ಒಂದು ವೇಳೆ ತಬ್ಬಲಿಯಾದ ಜನಗಳ ಮನೆಯಲ್ಲಿ ಉಳುವುದಕ್ಕೆ ದನಕರುಗಳು ಇಲ್ಲದೆ, ವ್ಯವಸಾಯಕ್ಕೆ ಯೋಗ್ಯವಾದ ಉಪಕರಣಗಳು ಇಲ್ಲದೆ ಇದ್ದಾಗ, ಸರ್ಕಾರ ಅಂತಹವರಿಗೆ ನೆರವು ನೀಡಬೇಕು. ನನ್ನ ಸ್ವಂತ ಊರಿನಲ್ಲಿ ದೇವರ ಪೂಜೆ ಮಾಡತಕ್ಕಂಥ ಒಬ್ಬ ವ್ಯಕ್ತಿಗೆ ದನಕರುಗಳಿಲ್ಲ. ಅವನು ಊರಿನಲ್ಲಿ ಉಪವಾಸ ಮಾಡಬೇಕು, ಅವನು ತನ್ನಲ್ಲಿ ಇದ್ದಂತಹ 4 ಎಕರೆ ಜಮೀನನ್ನು ಶ್ರೀಮಂತರಿಗೆ ಗೇಣಿಗೆ ಕೊಟ್ಟರೆ ಅದು ಅತನಿಗೆ ವಾಪಸ್ಸು ಬರುವ ಹಾಗೆಯೇ ಇಲ್ಲ. ಆದ್ದರಿಂದ ನಮ್ಮ ಕಾನೂನಿನ ಪ್ರಕಾರ ಇದರಲ್ಲಿ ಒಂದು ಪರಿಮಿತಿ ಇರಬೇಕು. ಶ್ರೀಮಂತರು ಯಾರಿದ್ದಾರೋ ಅವರು ಲ್ಯಾಂಡ್ ಲಾರ್ಡ್‌ಗಳಿಗೆ ಕೊಟ್ಟಿರತಕ್ಕಂಥ ಜಮೀನನ್ನು ಮತ್ತೆ ಅವರಿಂದ ವಾಪಸ್ಸು ತೆಗೆದು ಕೊಳ್ಳುವುದಕ್ಕೆ ಸೂಕ್ತ ತಿದ್ದುಪಡಿಯನ್ನು ಮಾಡಬೇಕು.

ಮೊದಲು ಬಾಂಡೆಡ್ ಲೇಬರರ್ಸ್ ಆಗಿದ್ದವರು ಈಗ ಕಾಂಟ್ರಾಕ್ಟ್ ಲೇಬರರ್ಸ್ ಆಗಿದ್ದಾರೆ. ನನಗೆ ತಿಳಿದ ಹಾಗೆ ಈಗ ಬಾಂಡೆಡ್ ಲೇಬರ್ಸ್ ಎಂಬುದಾಗಿ ಇಲ್ಲ ನಮ್ಮ ಅಧಿಕಾರಿಪಾಹಿಗಳು ಒಳ್ಳೆಯ ಹೆಸರು ತೆಗೆದುಕೊಳ್ಳಬೇಕೆಂಬ ದೃಷ್ಟಿಯಿಂದ ರಿಪೋರ್ಟ್ ಕಳುಹಿಸುತ್ತಾರೆ ಅನೇಕ ಸಂದರ್ಭಗಳಲ್ಲಿ ಅಧಿಕಾರಿಗಳು ಜನನ ಮರಣಗಳ ಪಟ್ಟಿಯನ್ನು ಕಳುಹಿಸಿ ಎಂದರೆ ಸಾಯದೆ ಇರುವವರನ್ನು ಸತ್ತಿದ್ದಾನೆ ಎಂದು ರಿಪೋರ್ಟ್ ಕಳುಹಿಸುತ್ತಾರೆ. ಬಾಂಡೆಡ್ ಲೇಬರರ್ಸ್‌ಗೆ ಈಗ ನಿಲ್ಲುವುದಕ್ಕೆ ನೆಲೆಯಿಲ್ಲ ; ಅವರಿಗೆ ಬೇರೆ ಯಾವ ವ್ಯವಸ್ಥೆಯೂ ಇಲ್ಲ. ಅಂತಹವರಿಗೇನಾದರೂ ಬೇರೆ ಏರ್ಪಾಡು ಮಾಡುತ್ತೇವೆಂದು ಬಾಯಲ್ಲಿ ಹೇಳುತ್ತಾರೆಯೇ ಹೊರತು ಕಾರ್ಯತಃ ಇದುವರೆವಿಗೂ ಏನೂ ಮಾಡಲಿಲ್ಲ. ಅವರಿಗೆ ಎಲ್ಲಾ ರೀತಿಯ ನವಲತ್ತುಗಳ ವ್ಯವಸ್ಥೆ ಮಾಡಿ ಎಂದು ಹೇಳಿದರೂ ಆ ಸೌಲಭ್ಯ ಇನ್ನೂ ಮಾಡಲಿಲ್ಲ. ಆದರೆ ಹಳೇ ಮೈಸೂರು ವಿಭಾಗದಲ್ಲಿ ಬಾಂಡೆಡ್ ಲೇಬರರ್ಸ್‌ನ್ನು ಕಿತ್ತು ಹಾಕಿದ ಮೇಲೆ ಕಾಂಟ್ರಾಕ್ಟ್ ಲೇಬರರ್ಸ್ ಪ್ರಶ್ನೆಯೇ ಇಲ್ಲ. ಆ ವಿಚಾರದಲ್ಲಿ ಈಗ ನಾವು ಏನಾದ ಮಾಡುವುದು ಬೇಡ. ಎಷ್ಟೋ ವಿಷಯಗಳು ಇಲ್ಲಿಯವರೆಗೂ ಹದಗೆಟ್ಟಿವೆ. ಆದ್ದರಿಂದ ಆಯಾ ಜಿಲ್ಲಾಧಿಕಾರಿಗಳು ಇಂತಹವರ ಸಂಖ್ಯೆ ಎಷ್ಟು, ಅವರಿಗೆ ಎಷ್ಟು ಸಂಬಳ ಕೊಡಬೇಕೆಂಬುದನ್ನು ಪಟ್ಟಿ ಮಾಡಿ ಅವರಿಗೆ ಸೂಕ್ತ ಸೌಲಭ್ಯಗಳನ್ನು ಒದಗಿಸಬೇಕು. ಈಗ ಇಲ್ಲಿ ಮಾನ್ಯ ಶ್ರೀ ಕೆ. ಎಚ್. ಪಾಟೀಲ್‌ರವರು ಇಲ್ಲ, ಶ್ರೀಮಾನ್ ಎಚ್, ಸಿ. ಶ್ರೀಕಂಠಯ್ಯ ನವರು ಮಾತ್ರ ಇದ್ದಾರೆ.

ಇನ್ಸ್‌ಪಿನರ್ಷೇಷನ್ ಆಫ್ ಟ್ರೀಸ್ ವಿಷಯದ ಬಗ್ಗೆ ಒಂದು ಕಾನೂನನ್ನು ಮಾಡಿದ್ದಾರೆ. ಆ ಕಾನೂನು ಎಷ್ಟು ಕೆಳಮಟ್ಟಕ್ಕೆ ಹೋಗಿದೆ ಎಂದರೆ ಹಣವಿಲ್ಲದ ಬಡವರಿಗೆ ಉಕ್ಕಿನ ಬಲೆಯಾಗಿದೆ ; ಹಣವಿರುವ ಶ್ರೀಮಂತ ವರ್ಗದವರಿಗೆ ಜೇಡರ ಬಲೆಯಾಗಿದೆ. ಪ್ರಿಸರ್ವೇಷನ್ ಆಫ್ ಟ್ರೀಸ್‌ಬಗ್ಗೆ ಕಾನೂನು ಆದ ಮೇಲೆ ಪ್ರತಿಯೊಬ್ಬ ಫಾರೆಸ್ಟ್ ಗಾರ್ಡ್ ಲಾರ್ಡ್‌ಗಳಾಗಿದ್ದಾರೆ. ಆ ಪ್ರದೇಶದಲ್ಲಿ ಒಂದು ಮರದ ತುಂಡು ಕಡಿದರೂ ರೈತನಿಗೆ ಶಿಕ್ಷೆ, ಅದೇ ಅವನ ಸ್ವಂತ ಜಮೀನಿನಲ್ಲಿರುವ ಮರವನ್ನು ಕಡಿದರೂ ಅತನಿಗೆ ಶಿಕ್ಷೆ. ಫಾಲಿಪ್ಯೆಬರ್ಸ್‌ಗೆ ಒಂದು ಟನ್‌ಗೆ 25 ರೂಪಾಯಿಗಳಂತೆ ಒಳ್ಳೆಯ ಮರಗಳನ್ನು ಕೊಡುತ್ತಿದ್ದಾರೆ. ಆದರೆ, ರೈತನಾದವನಿಗೆ ಅದನ್ನೇ ಒಂದು ಟನ್‌ಗೆ 180 ರೂಪಾಯಿಗಳವರೆಗೆ ಕೊಡುತ್ತಿದ್ದಾರೆ. ತಬ್ಬಲಿ ಜನಗಳಿಗೆ ಅದನ್ನೇ ಒಂದು ಟನ್ನಿಗೆ 140-150-160 ರೂಪಾಯಿಗಳಿಗೆ ಕೊಡುವ ಪರಿಪಾಟವಾಗಿದೆ. ಪ್ರೊಹಿಬಿಷನ್ ಆಫ್ ಟ್ರೀಸ್ ಬಗ್ಗೆ ಕಾನೂನು ಮಾಡಿದ್ದೇನೋ ಸರಿ. ಆದರೆ, ನಮ್ಮ ರಾಜ್ಯದಲ್ಲಿರತಕ್ಕ 3 ಕೋಟಿ ಚಿಲ್ಲರೆ ತಬ್ಬಲಿ ಜನಗಳಿಗೆ ಈ ರೀತಿಯಾಗಿ ಮರವನ್ನು ಸೌದೆಗಾಗಿ ಒದಗಿಸಿದ್ದೇ ಆದರೆ 11 ವರ್ಷಗಳಲ್ಲಿ ರಾಜ್ಯದಲ್ಲಿ ಇಡೀ ಕಾಡು ಇರುವುದಿಲ್ಲ. ಇದನ್ನು ನಿಲ್ಲಿಸುವುದಕ್ಕಾಗುವುದಿಲ್ಲ.

ಮನೆಗಳಲ್ಲಿ ಅಡಿಗೆ ಮಾಡುವುದಕ್ಕೆ ಸೌದೆ ಬೇಕೇ ಬೇಕು, ಅದಕ್ಕಾಗಿ ತಾಳಿಯನ್ನು ಒತ್ತೆ ಇಟ್ಟು ಅಡಿಗೆ ಮಾಡಲು ಸಾಧ್ಯವಾಗುವುದಿಲ್ಲ. ಮರಗಳನ್ನು ಚೆನ್ನಾಗಿ ಬೆಳಸಬೇಕಾದರೆ ವರ್ಷಕ್ಕೆ 50 ಕೋಟಿ ರೂಪಾಯಿಗಳನ್ನು ಖರ್ಚು ಮಾಡಿಯಾದರೂ ಕಾಡು ಬೆಳೆಸಿ. ಖಾಸಗಿಯಾಗಿ ಮರಗಳನ್ನು ಬೆಳೆಸುವವರಿಗೆ ಪ್ರೋತ್ಸಾಹ ಕೊಡಿ. ಪ್ರಿಸರ್ವೇಷನ್ ಆಫ್ ಟ್ರೀಸ್ ಬಗ್ಗೆ ಕಾನೂನು ಮಾಡಿದ್ದರಿಂದ ಫಾರೆಸ್ಟ್ ಇಲಾಖೆಯ ಫಾರೆಸ್ಟ್ ಗಾರ್ಡ್‌ಗಳು ಲಂಚ ತೆಗೆದುಕೊಳ್ಳುವುದು ಜಾಸ್ತಿಯಾಗಿದೆ. ಅದನ್ನು ತಪ್ಪಿಸಿ ಫಾರೆಸ್ಟ್ ರೇಂಜ್ ಆಫೀಸರುಗಳೂ ಸಹ ಇತ್ತೀಚೆಗೆ ಹೆಚ್ಚಿಗೆ ಲಂಚ ತೆಗೆದುಕೊಳ್ಳುತ್ತಿದ್ದಾರೆ. ಅದನ್ನು ಕೂಡಲೆ ತಪ್ಪಿಸಿ ಬಡ ಜನರ ಬಗ್ಗೆ ಸರ್ಕಾರ ಒಳ್ಳೆಯ ಕೆಲಸ ಮಾಡಿದರೂ ಇಂತಹ ಕೆಲವು ಸಣ್ಣ ಪುಟ್ಟ ಕಾರಣಗಳಿಂದ ಸರ್ಕಾರಕ್ಕೂ ಕೂಡ ಕೆಟ್ಟ ಹೆಸರು ಬರುತ್ತದೆ. ಒಳ್ಳೆಯ ಉದ್ದೇಶಗಳಿಗಾಗಿ ಸರ್ಕಾರ ಸಾಕಷ್ಟು ಹಣವನ್ನು ಖರ್ಚು ಮಾಡಿದರೂ ಅದು ಹೊಳೆಯಲ್ಲಿ ಹುಣಿಸೇಹಣ್ಣನ್ನು ಕದಡಿದಂತಾಗುತ್ತಿದೆ. ಸಾಮಾನ್ಯ ಜನರಿಗೆ ತೊಂದರೆಯಾಗದ ರೀತಿಯಲ್ಲಿ ಅಧಿಕಾರಿಗಳು ಸಮಗ್ರವಾಗಿ ಕಾನೂನುಗಳನ್ನು ಪ್ರಯತ್ನಿಸಿ ಸಾಮಾನ್ಯ ಜನರಿಗೆ ಅದರಲ್ಲೂ ಹಳ್ಳಿಗಾಡಿನ ಜನರಿಗೆ, ವಿಧಾನ ಸೌಧದ ವ್ಯವಹಾರದಿಂದ ಹಿಡಿದು ಕಡಿಮೆ ದರ್ಜೆಯಲ್ಲಿರುವ ನೌಕರರ ವ್ಯವಹಾರದ ಮಟ್ಟದವರೆಗೂ ತಕ್ಕ ಸೌಲಭ್ಯಗಳನ್ನು ಒದಗಿಸಬೇಕು. ಏಕೆಂದರೆ ಅನೇಕ ವೇಳೆ ಬಡವರ ಅರ್ಜಿಗಳು ಒಲ್ಡ್ ಏಜ್ ಪೆನ್‌ಷನ್‌ಗಾಗಿ ತಮ್ಮ ಮುಖಾಂತರವೇ ಹೋಗಬೇಕಾಗುತ್ತದೆ. ಆದ್ದರಿಂದ ನಮ್ಮ ಅಧಿಕಾರಿಗಳಲ್ಲಿ ಈಗಿನ ಮನೋಭಾವನೆ ಬದಲಾವಣೆ ಆಗಬೇಕು. ಏಕೆಂದರೆ ಇದು ಒಂದು ಡಿಸ್‌ಕ್ರಿಮಿನೆಟ್ ಮಾಡಿ ಮಾಡತಕ್ಕ ಕೆಲಸವಲ್ಲ. ಏಕೆಂದರೆ ಕೆಳಮಟ್ಟದ ಅಧಿಕಾರಿಗಳು ಯಾರೇ ಆಗಲಿ ಇವನ್ನು ನದುಪಯೋಗಪಡಿಸಿಕೊಂಡಿದ್ದರೆ ಅಂತಹ ಅಧಿಕಾರಿಗಳಲ್ಲಿ ಸವಾರಿ ಮಾಡುವ ಅವಕಾಶವಿದ್ದರೆ, ಅದನ್ನು ನಡೆಸಿಯೇ ನಡೆಸುತ್ತಾರೆ. ಅವಕ್ಕೆ ಹೆಚ್ಚಿನ ಅವಕಾಶವೂ ಇದೆ. ಇಷ್ಟನ್ನು ನೆನಸಿಕೊಂಡು ಈ ಕಾನೂನುಗಳನ್ನು ಪರಿಷ್ಕರಿಸಿ ಬೇರೆ ಯಾವ ರೀತಿ ಅಮೆಂಡ್‌ಮೆಂಟನ್ನು ತರಬೇಕು ಎಂದು ಯೋಜನೆ ಮಾಡಿ ಈ ತೊಂದರೆಗಳನ್ನು ತಪ್ಪಿಸುವಂತಹ ಅಮೆಂಡ್‌ಮೆಂಟ್ ತರುವುದು ಸೂಕ್ತವೆಂದು ಹೇಳುತ್ತೇನೆ.

ಇನ್ನು ಲ್ಯಾಂಡ್ ರೀ ಫಾರಂಸ್ ಬಗ್ಗೆ ಹೇಳಬೇಕೆಂದರೆ ಮುಖ್ಯಮಂತ್ರಿಗಳಿಗೆ ಒಂದು ಉದಾಹರಣೆ ಕೊಡುತ್ತೇನೆ. ಸುಮಾರು ನಮ್ಮ ತಾಲ್ಲೂಕಿನಲ್ಲಿ 3254 ಕೇಸ್‌ಗಳು ನಡೆದಿವೆ ಅದರಲ್ಲಿ ಕಂಟೆಸ್ಟೆಡ್ ಕೇಸ್‌ಗಳು ಬೇಕಾದಷ್ಟು ಇವೆ ಸುಮಾರು 375 ಕೇಸ್‌ಗಳನ್ನು ರಿಜೆಕ್ಟ್ ಮಾಡಿದ್ದೇವೆ. ಇವುಗಳು ಈ ಜ್ಯೂರಿಸ್‌ಡಿಕ್ಷನ್‌ನಲ್ಲಿ ಬರುವುದಿಲ್ಲ. ಇಲ್ಲಿಗೆ ನಾವು 74 ಸಿಟಿಂಗ್‌ಗಳನ್ನು ತೆಗೆದುಕೊಂಡಿದ್ದೇವೆ. ಒಂದು ದಿವಸಕ್ಕೆ ಆರೂವರೆ ಕೇಸ್‌ನಂತೆ ತೀರ್ಮಾನ ಮಾಡಿದ್ದೇವೆ. ಇನ್ನು ಉಳಿದಿರತಕ್ಕಂಥ 2421 ಕೇಸ್‌ಗಳು ಏನು ಇವೆ ಅವುಗಳೆಲ್ಲಾ ಕಂಟೆಸ್ಟೆಡ್ ಕೇಸ್. ಆದ್ದರಿಂದ ಮಾನ್ಯ ಮುಖ್ಯಮಂತ್ರಿಗಳು ಅಧಿಕಾರಿಗಳನ್ನು ಕರೆದು ಕೇಳಿದರೆ ಗೊತ್ತಾಗುತ್ತದೆ. ಕಂಟೆಸ್ಟೆಡ್ ಕೇಸ್ ಏನು ಇರುತ್ತದೆ ಅವುಗಳನ್ನು ಡಿಸ್‌ಪೋಸ್ ಮಾಡಬೇಕಾದರೆ ದಿವಸಕ್ಕೆ ಎರಡು ಕೇಸ್ ಮಾಡುವುದಕ್ಕೆ ಆಗುವುದಿಲ್ಲ ಬರೀ ಮುಕ್ಕಿಕಾಮಕ್ಕಿ ಮಾಡಿದರೆ ಅವು ಹೈಕೋರ್ಟ್‌ಗೆ ಮುಂದೆ ಹೋಗುತ್ತದೆ. ಅಲ್ಲಿ ಅವರು ವಾಪಸ್ ಹಾಕುತ್ತಾರೆ. ಆದ್ದರಿಂದ ಇದನ್ನೆಲ್ಲಾ ಸಮಗ್ರವಾಗಿ ತೀರ್ಮಾನ ಮಾಡಬೇಕಾದರೆ ಸುಮಾರು ದಿನಕ್ಕೆ 2 ಕೇಸ್ ಮಾಡಬಹುದು. ಆ ರೀತಿ ಮಾಡಿದರೆ ಇದಕ್ಕೆ ಉಳಿದಿರುವ ಕೇಸುಗಳಿಗೆ 1213 ದಿವಸಗಳು ಬೇಕಾಗುತ್ತದೆ. ಅಂದರೆ 152 ತಿಂಗಳುಗಳು ಅಥವಾ 12ವರೆ ವರ್ಷಗಳು ಬೇಕಾಗುತ್ತವೆ ಇದರಿಂದ ಎಂತಹ ನ್ಯಾಯ ಸಿಕ್ಕುತ್ತದೆ ಎಂಬುದನ್ನು ಯೋಚನೆ ಮಾಡಬೇಕು. ಯಾವುದೇ ಕೇಸ್ ಇದ್ದರೂ ಅದು 5 ವರ್ಷಗಳಲ್ಲಿ ಮುಗಿಸಬೇಕು. ಒಂದು ತಿಂಗಳಿಗೆ 20 ದಿವಸ ಕೂತುಕೊಳ್ಳಬೇಕು. ಅದಕ್ಕೂ 5 ವರ್ಷ ಬೇಕಾಗುತ್ತದೆ. ವಿಚಾರಣೆ ನಡೆಸಿ ಎವಿಡೆನ್ಸ್ ತೆಗೆದುಕೊಂಡು ತೀರ್ಮಾನ ಮಾಡಬೇಕಾದರೆ ಇದು ಅನಂತಕಾಲಕ್ಕೆ ಹೋಗುತ್ತದೆ. ಎರಡು ಸಾವಿರಕ್ಕಿಂತ ಕೇಸ್ ಹೆಚ್ಚಿಗೆ ಇದ್ದರೆ ಕೊನೆ ಪಕ್ಷ 10 ವರ್ಷಗಳು ಬೇಕಾಗುತ್ತವೆ. ಆದ್ದರಿಂದ ದಯವಾಡಿ ಶಾಸನಕರನ್ನು ಈ ಲ್ಯಾಂಡ್ ಟ್ರಿಬ್ಯೂನಲ್‌ಗೆ ಹಾಕಬೇಡಿ. ನಮಗೆ ಅಸೆಂಬ್ಲಿಗಳು ಇರುತ್ತವೆ, ನಮ್ಮ ತಾಲ್ಲೂಕಿನಲ್ಲಿ ಈ ಸಂದರ್ಭದಲ್ಲಿಯೇ ಸಿಟ್ಟಿಂಗ್ಸ್‌ಗಳು ಇವೆ, ಆದ್ದರಿಂದ ಅವರಿಗೂ ತೊಂದರೆ ನಮಗೂ ತೊಂದರೆಯಾಗುತ್ತದೆ. ಆದ್ದರಿಂದ ದಯವಾಡಿ ಒಳ್ಳೆಯವರಾದಂತಹ ಖಾಸಗಿಯವರನ್ನು ಹಾಕಿ, ಕಾಯಂ ಆಗಿ ಒಬ್ಬ

ಚೇರ್‌ಮನ್ ಹಾಕಿದರೆ ಒಳ್ಳೆಯದು, ಅದನ್ನು ಪರಮನೆಂಟ್ ಟ್ರಿಬ್ಯೂನಲ್ ಕೋರ್ಟ್ ಮಾಡಿದರೆ 5 ವರ್ಷದೊಳಗೆ ಇವುಗಳನ್ನು ಮುಗಿಸಬಹುದು. ಇಲ್ಲದೆ ಹೋದರೆ 10 ವರ್ಷಗಳಾದರೂ ಮುಗಿಸುವುದಕ್ಕೆ ಸಾಧ್ಯವಿಲ್ಲ,

ಇನ್ನು ಶ್ರೀಮಾನ್ ರಂಗನಾಥ್ ಅವರು ಇದ್ದಾರೆ. ತಿವರ ಸೊಸೈಟಿಗಳ ಅಮಾಲ್ಗಮೇಷನ್ ಮಾಡುವಾಗ ಡಯಾಬಟ್ ಇನ್‌ಸ್ಟಿಟ್ಯೂಷನ್ಸ್ ಮಾಡಿರುವುದು ಸ್ವಾಗತಾರ್ಹವಾದ ಕೆಲಸ, ಅದರಿಂದ ಭಾರೀ ಅನುಕೂಲವಾಗುತ್ತದೆ ಎಂದು ನಾನು ಕೂಡ ತಿಳಿದುಕೊಂಡಿದ್ದೆ. ಅನೇಕ ಕಡೆ ಡಿಫಾಲ್ಟರ್ಸ್‌ಗಳನ್ನು ಡೈರೆಕ್ಟರ್ಸ್‌ಆಗಿ ಮಾಡಿದ್ದಾರೆ. ಈಗ ಬರಗಾಲ ಎಲ್ಲಾ ಕಡೆಯಲ್ಲಿ ಬಂದಿದೆ. ಅಲ್ಲಿಯ ಜನರಿಗೆ ಸಕ್ಕರೆ, ಜೋಳ ಮತ್ತು ಗೋಧಿ, ರಾಗಿ ಬೇಕು ಇವನ್ನು ಕೊಡುವುದಕ್ಕೆ ಅಧಿಕಾರಿಗಳಿಗೆ ಹೇಳಿದ್ದಾರೆ. ನಮ್ಮ ತಾರೊಲೀಕಿನಲ್ಲಿ ಒಂದು ಕೇಜಿ ಜೋಳ ಬೇಕಾದರೆ ನಮಾರು 15 ಮೈಲಿ ನಡೆದು ಹೋಗಬೇಕಾಗುತ್ತದೆ. ಸಾಧಾರಣವಾಗಿ ಒಂದು ವಿಲೇಜ್‌ಗೆ ಒಂದು ಸೊಸೈಟಿ ಇರಬೇಕು, ಏನು ಸೌಲಭ್ಯ ಬೇಕೋ ಅದು ಸಿಕ್ಕಬೇಕು. ಎಷ್ಟೋ ಕಡೆ ಬಹಳ ತೊಂದರೆಯಾಗಿದೆ. ಇನ್ನು ಸೊಸೈಟಿಗಳಲ್ಲಿ ಜನರಿಗೆ ಸರಿಯಾಗಿ ಸಾಲ ಸಿಕ್ಕುತ್ತಿಲ್ಲ ಕೆಲವರು ಕೋರ್ಟುಗಳಿಗೂ ಹೋದರೂ ಸ್ವೇ ಆಗಿರುವ ಕೇಸುಗಳು ಇನ್ನು ಬಗೆಹರಿದಿಲ್ಲ. ಜನರಿಗೆ ಸಾಲ ಸಿಕ್ಕುತ್ತಿಲ್ಲ. ಇದನ್ನೆಲ್ಲಾ ಹೇಳುವುದಕ್ಕೆ ಹೋಗಬಾರದು.

ಶ್ರೀ ಕೆ. ಎಚ್. ರಂಗನಾಥ್.—15 ಮೈಲಿ ನಡೆದು ಹೋಗಬೇಕೆಂದು ಏನೂ ಇಲ್ಲ, ಬೇಕಾದರೆ ತಾವು ಎಲ್ಲಿ ಆ ರೀತಿ ತೊಂದರೆಯಾಗಿದೆ ಎಂದು ತಿಳಿಸಿದರೆ ಅಂತಹ ತೊಂದರೆಯಾದ ಕಡೆ ಬ್ಯಾಂಚ್‌ಗಳನ್ನು ಮಾಡಿ ಕೊಡಿಸುತ್ತೇನೆ. ಇನ್ನು ಡಿಫಾಲ್ಟರ್ಸ್‌ಗಳು ಎಲ್ಲೆಲ್ಲಿ ಇದ್ದಾರೆ ಎಂಬುದನ್ನು ತಿಳಿಸಿದರೆ ತತ್‌ಕ್ಷಣ ಮೊದಲು ಅವರನ್ನು ತೆಗೆಯಿಸಿ ಬೇರೆಯವರನ್ನು ಹಾಕುತ್ತೇನೆ. ನಾವು ಒಂದು ಹಂತದಲ್ಲಿ ಗೈಡೆನ್ಸ್‌ನ್ನು ವರ್ಕರ್ಸ್‌ಟಾಟ್‌ಗಳಿಗೆ ಕೊಡುವುದಕ್ಕೆ ವ್ಯವಸ್ಥೆ ಮಾಡಿದ್ದೇವೆ. ಕೆಲವು ಕಡೆಗಳಲ್ಲಿ ತೊಂದರೆಯಾಗಿರಬಹುದು ಮಾನ್ಯ ಸದಸ್ಯರು ನನ್ನ ಗಮನಕ್ಕೆ ತಂದರೆ ಅದಕ್ಕೆಲ್ಲಾ ಸರಿಯಾದ ವ್ಯವಸ್ಥೆ ಮಾಡುತ್ತೇನೆ. ಈ ರೀತಿ ಯಾವ ಯಾವುದಾದರೂ ನಿರ್ದಿಷ್ಟವಾಗಿ ಇದ್ದರೆ ಅದನ್ನು ನನ್ನ ಗಮನಕ್ಕೆ ತಂದರೆ ಕೂಡಲೇ ಅವರ ಕಡೆಗೆ ಗಮನಕೊಟ್ಟು ಅನುಕೂಲಮಾಡಿ ಕೊಡುತ್ತೇನೆ. ಡಿಫಾಲ್ಟರ್ಸ್ ಆಗಿರುವುದು ನನ್ನ ಗಮನಕ್ಕೆ ತಂದರೆ ಅದನ್ನು ಪುನರ್ ಪರಿಶೀಲನೆ ಮಾಡಿ ಬೇರೆಯವರಿಗೆ ಅವಕಾಶ ಮಾಡಿಕೊಡುತ್ತೇನೆ.

ಶ್ರೀ ಹೆಚ್. ಡಿ. ದೇವೇಗೌಡ.—ಡಿಫಾಲ್ಟರ್ಸ್ ಇದ್ದರೆ ಬರೆದರೆ ಅದನ್ನು ಸರಿಮಾಡುತ್ತೇನೆಂದು ಮಾನ್ಯ ಮಂತ್ರಿಗಳು ಹೇಳುತ್ತಾರೆ, ದಯಮಾಡಿ ಅವರಿಗೆ ಕೇಳುವುದೇನೆಂದರೆ ಕೋ ಆಪರೇಟಿವ್ ಇಲಾಖೆಯಲ್ಲಿ ರಿಜಿಸ್ಟ್ರಾರ್, ಡೆಪುಟ್ಟಿ ರಿಜಿಸ್ಟ್ರಾರ್‌ಗಳು ಯಾರೂ ಇಲ್ಲವೇ ಅವರಿಗೆ ಸರ್ಕಾರದಿಂದ ಸಂಬಳ ಕೊಡುವುದಿಲ್ಲವೇ ? ಏನು ಮಾಡುತ್ತಿದ್ದಾರೆ ? ಅವರಿಂದ ನೀವು ಪರಿಶೀಲನೆ ಮಾಡಿಸಿ ವರದಿಯನ್ನು ತರಿಸಿಕೊಂಡು ಸೂಕ್ತ ಕ್ರಮ ತೆಗೆದುಕೊಳ್ಳಿ. ನಿಮ್ಮ ಪಕ್ಷದವರೇ ಹೇಳುತ್ತಿರುವಾಗ ಪರಿಶೀಲನೆ ಮಾಡುವುದು ಸೂಕ್ತವಲ್ಲವೇ ? ಅಧಿಕಾರಿಗಳು ವಿರೋಧ ಪಕ್ಷದವರು ಹೇಳಿದ್ದರೆ ಅದನ್ನು ಪರಿಶೀಲನೆ ಮಾಡುವುದು ಸ್ವಲ್ಪ ಕಷ್ಟ.

ಶ್ರೀ ಕೆ. ಎಚ್. ರಂಗನಾಥ್ —ಅಧಿಕಾರಿಗಳೇ ಪರಿಶೀಲನೆ ಮಾಡಿ ಅವರೇ ಕಾರ್ಯಕ್ರಮ ತೆಗೆದುಕೊಂಡು ಸರಿಪಡಿಸುವುದಾದರೆ ನಾವು ನೀವು ಇರಬೇಕಾಗಿರಲ್ಲ ಒಂದು ವೇಳೆ ಸದಸ್ಯರೇ ಹೇಳಿದರೂ ಅದು ತಪ್ಪಾಗಲಾರದು

ಶ್ರೀ ಎಚ್. ಡಿ ದೇವೇಗೌಡ.—ತಾವು ಏನು ನಾಮಕರಣ ಮಾಡಿದ್ದೀರಿ ಅದರಲ್ಲಿ ನೂರಕ್ಕೆ 25 ಪರ್ಸೆಂಟ್ ಡಿಫಾಲ್ಟರ್ಸ್ ಇದ್ದಾರೆ ? Get it verified. I have got a list.

SRI K. H. RANGANATH.—I would make this request to the Hon'ble the Leader of the Opposition. If he were to show in any one of the constituencies that there are defaulters to the tune of 25 per cent of the Directors nominated, to-morrow itself, I would see that they are removed and others are nominated. In fact,

Government will never shirk. It is not the policy of the Government to see that there are any defaulters in the societies either at village level, or at the taluka level or at the district level.

ಶ್ರೀ ಎಚ್. ಎನ್. ನಂಜೇಗೌಡ.—ನಮ್ಮ ಕ್ಷೇತ್ರದಲ್ಲಿ ಅರ್ಧಾವಧಿ ಸಾಲ ತೆಗೆದುಕೊಂಡಿರುವವರಲ್ಲಿ 30 ಭಾಗ ಹೋದವರ್ಷ ತೆಗೆದುಕೊಂಡಿರುವವರು ಇದ್ದಾರೆ. ಇಲ್ಲಿ ಎಷ್ಟೋ ಜನರು ಹೈಕೋರ್ಟಿಗೆ ಹೋಗಿದ್ದಾರೆ. ಸ್ಟೇ ಆಗಿದೆ. ಸುಮಾರು ಐದುನೂರು ಅರುನೂರು ಕೇಸುಗಳಲ್ಲಿ ಈ ರೀತಿಯಾಗಿದೆ. ನಾನಾದರೂ ಹೇಳುವುದು ಇಷ್ಟೇ. ಪಟ್ಟಣಗಳಲ್ಲಿ ಬೀದಿಗೆ ಒಂದು ಎರಡು ಸೊಸೈಟಿಗಳು ಇರುತ್ತವೆ. ಎಲ್ಲಿ ಜನಗಳಿಗೆ ತೊಂದರೆ ಇದೆ ಅಂತಹ ಕಡೆಗಳಲ್ಲಿ ಸೊಸೈಟಿಗಳನ್ನು ಮಾಡಿದರೆ ಜನರಿಗೆ ಸಹಾಯವಾಗುತ್ತದೆ.

ಇನ್ನು ಒಂದು ವಿಷಯ ಶ್ರೀಮಾನ್ ಹುಚ್ಚಮಾಸ್ತಿಗೌಡರು ಇಲ್ಲಿ ಇಲ್ಲ. ಹಿಂದೆ ಶ್ರೀಮಾನ್ ದೇವೇಗೌಡರ ಸರ್ಕಾರ ಇದ್ದಾಗ ಅನ್ ಆಥರೈಸ್ಡ್ ಅಕ್ಯೂಪೆಂಟ್ಸ್ ಏನು ಇದ್ದಾರೆ ಅವರನ್ನೆಲ್ಲಾ ಒಕ್ಕಲು ಎಬ್ಬಿಸುತ್ತಿದ್ದರು, ಆ ಕಾನೂನಿಂದ ಕೇವಲ ಬಡಜನರಿಗೆ ಮಾತ್ರ ತೊಂದರೆಯಾಯಿತು ದೊಡ್ಡ ದೊಡ್ಡವರಿಗೆ ಏನು ತೊಂದರೆಯಾಗಲಿಲ್ಲ. ಯಾವಾಗಲೂ ಕಾನೂನು ದೊಡ್ಡವರಿಗೆ ಜೇಡರ ಬಲೆಯಾಗುತ್ತದೆ. ಅದೇ ಬಡವರಿಗೆ ಕಬ್ಬಿಣದ ಬೇಲಿಯಾಗುತ್ತದೆ.ಆದ್ದರಿಂದ ಎಲಿಕ್ಷನ್ ಮಾಡುವಾಗ ಸುಮಾರು ಬಡವರಿಗೆ ತೊಂದರೆಯಾಗುತ್ತದೆ. ಆದ್ದರಿಂದ ಅಂತಹವರು ಇವತ್ತಿನ ದಿವಸ ಒಕ್ಕಲು ಎಬ್ಬಿಸುವುದಕ್ಕೆ ಕಾರ್ಯ ಪ್ರವೃತ್ತರಾಗಿದ್ದಾರೆ. ಇದನ್ನು ದಯವಾಡಿ ತಪ್ಪಿಸಬೇಕು. ಜನಗಳಲ್ಲಿ ಯಾವಾಗಲೂ 108 ಒಳ್ಳೆಯ ಕೆಲಸ ಮಾಡಿದ್ದರೂ ಒಂದು ಯಾವುದಾದರೂ ಕೆಟ್ಟ ಕೆಲಸವಾದರೆ ಅದು ಮೊದಲು ದುಷ್ಪರಿಣಾಮಕ್ಕೆ ಕಾರಣವಾಗುತ್ತದೆ. ಆದ್ದರಿಂದ ಸಣ್ಣ ಪುಟ್ಟ ವ್ಯವಹಾರಗಳು ಈ ರೀತಿ ಆಗಿರುತ್ತವೆ. ಅವುಗಳನ್ನು ದಯವಾಡಿ ಬಗೆಹರಿಸಬೇಕೆಂದು ತಮ್ಮ ಮುಖಾಂತರ ಸೂಚನೆ ಕೊಡುವುದಕ್ಕೆ ಇಷ್ಟಪಡುತ್ತೇನೆ: ಅನಧಿಕೃತವಾಗಿ ಒಕ್ಕಲು ಎಬ್ಬಿಸಬೇಕು. ಕೊನೆಯಪಕ್ಷ ಐದು ಎಕರೆಗಳ ಮೇಲೆ ಇರುವಂತಹವರನ್ನು ನೀವು ಏನು ಬೇಕಾದರೂ ಮಾಡಿ ಏನೂ ಇಲ್ಲದೆ ಇರತಕ್ಕಂಥ ಜನರು ಇದ್ದರೆ ಅವರನ್ನು ಅನಧಿಕೃತವಾಗಿ ತೊಂದರೆ ಕೊಡುವುದು ಸರಿಯಲ್ಲ. ಬಡವರನ್ನು ಉಳಿಸುವ ರೀತಿಯಲ್ಲಿ ಸಂಬಂಧಪಟ್ಟ ಅಧಿಕಾರಿಗಳಿಗೆ ಸೂಚನೆ ಕಳುಹಿಸಬೇಕೆಂದು ಮಾನ್ಯ ಮುಖ್ಯಮಂತ್ರಿಗಳಿಗೂ ಮತ್ತು ಮಾನ್ಯ ಚನ್ನಬಸಪ್ಪನವರಿಗೂ ತಿಳಿಸುವುದಕ್ಕೆ ಇಷ್ಟಪಡುತ್ತೇನೆ.

ಏತಕ್ಕೆ ಈ ಮಾತನ್ನು ಹೇಳುತ್ತಿದ್ದೆ ಎಂದರೆ, ಜನಗಳಲ್ಲಿ ನಾವು 108 ಒಳ್ಳೆಯ ಕೆಲಸ ಮಾಡಿದರೂ ನಮ್ಮ ಬಗ್ಗೆ ಬೇಸರ ಬರಬೇಕಾದರೆ ಇದೆಲ್ಲಾ ಸಣ್ಣ ಪುಟ್ಟ ವ್ಯವಹಾರಗಳೆಂದು ತಾವು ತಿಳಿದುಕೊಳ್ಳಬಾರದೆಂದು ಈ ತಮ್ಮ ಮುಖಾಂತರ ಮುಖ್ಯ ಮಂತ್ರಿಗಳಿಗೆ ಸೂಚನೆ ಕೊಡುವುದಕ್ಕೆ ಇಷ್ಟಪಡುತ್ತೇನೆ, ಇವತ್ತು ನೀವು ಹಳ್ಳಿಗಳಲ್ಲಿ ಸಮಗ್ರವಾಗಿ ಒಕ್ಕಲು ಎಬ್ಬಿಸುವುದು ಬೇಡ; ಒಕ್ಕಲು ಎಬ್ಬಿಸಬೇಕಾದರೆ ಕನಿಷ್ಟ ಪಕ್ಷ 5 ಎಕರೆಗಿಂತ ಮೇಲ್ಪಟ್ಟು ಇದ್ದರೆ ಮಾಡಿ. ಆದರೆ ಇವತ್ತು ಏನೂ ಇಲ್ಲದೇ ಇರತಕ್ಕಂಥವನು, ಕೇರ್ ಆಫ್ ಫುಟ್ ಪಾತ್ ಎಂದು ಏನು ಹೇಳುತ್ತೇವೆ ಆ ರೀತಿ ಕೇವಲ 5 ಎಕರೆಗಿಂತ ಕಡಿಮೆ ಜಮೀನನ್ನು ಅನಧಿಕೃತವಾಗಿ ಯಾರಾದರೂ ಸಾಗುವಳಿ ಮಾಡುತ್ತಿದ್ದರೆ ಅದನ್ನು ಅವನಿಗೇ ಕೊಡಿಸಿಕೊಡುವ ಬಗ್ಗೆ ತಾವು ಕಾನೂನಿನಲ್ಲಿ ಬೇಕಾದರೆ ಒಂದು ಅಮೆಂಡ್ ಮೆಂಟನ್ನಾದರೂ ಮಾಡಿ.

2-00 ಪಿ.ಎಂ.

ಇನ್ನು ಕಾವೇರಿ ನೀರಿನ ವಿಷಾದದ ಬಗ್ಗೆ ಮತ್ತೆ ಇನ್ನು ಯಾವತ್ತಾದರೂ ಪ್ರಸ್ತಾಪ ಮಾಡುವುದಕ್ಕೆ ಇಷ್ಟಪಡುತ್ತೇನೆ. ಆದರೆ ಇದರ ಬಗ್ಗೆ ಒಂದು ಮಾತನ್ನು ಮಾತ್ರ ಹೇಳುವುದಕ್ಕೆ ಇಷ್ಟಪಡುತ್ತೇನೆ ಹಿಂದೆ ಮಾನ್ಯ ಮುಖ್ಯ ಮಂತ್ರಿಗಳವರು ಮತ್ತು ಶ್ರೀ ಚನ್ನಬಸಪ್ಪನವರೂ ಕೂಡ ಈ ಕಾವೇರಿ ನದಿ ನೀರಿನ ಹಂಚಿಕೆಯ ಬಗ್ಗೆ ನಮಗೆ ಭರವಸೆಯನ್ನು ನಮ್ಮ ಪಕ್ಷದ ಸಭೆಯಲ್ಲಿಯೂ ಹಾಗೂ ಈ ಸಭೆಯಲ್ಲೂ ಕೊಟ್ಟಿದ್ದಾರೆ. ನಮ್ಮ ಪಕ್ಷದ ಸಭೆಯಲ್ಲೂ ಕೂಡ ಇದರ ಬಗ್ಗೆ ಸಾಕಷ್ಟು ಚರ್ಚೆ ತಪರ್ಣವಾಗಿ ಚರ್ಚೆಯಾಗಿದೆ. ಕಾವೇರಿ ವಾಟರ್ ಡಿಸ್ಪ್ಯೂಟ್ ಬಗ್ಗೆ ಒಂದು ಅಥಾರಿಟಿ

ಮಾಡಬೇಕೇ ಬಿಡಬೇಕೇ ಎನ್ನುವುದೆಲ್ಲಾ ಚರ್ಚೆಯಾದ ಮೇಲೂ ಕೂಡ ಒಂದು ಭರವಸೆಯನ್ನು ಕೊಟ್ಟಿದ್ದರು. ಅದಾದ ನಂತರ ಮಾನ್ಯ ಚನ್ನಬಸಪ್ಪನವರು ಕೂಡ ಒಂದು ಭರವಸೆಯನ್ನು ಕೊಟ್ಟಿದ್ದರು. ನಮ್ಮ ರಾಜ್ಯಕ್ಕೆ ಯಾವುದೇ ರೀತಿಯಲ್ಲಿ ಅನ್ಯಾಯವಾಗುವ ರೀತಿಯಲ್ಲಿ ತೀರ್ಮಾನವಾಗುವುದಾದರೆ ಅದಕ್ಕೆ ನಾವು ಅವಕಾಶ ಕೊಡುವುದಿಲ್ಲ. ಎನ್ನುವ ಭರವಸೆಯನ್ನು ಅವರೂ ಕೂಡ ನಮಗೆ ಹಿಂದೆ ಭರವಸೆಯನ್ನು ಕೊಟ್ಟಿದ್ದರು. ಆದುದರಿಂದ ಅದರ ಬಗ್ಗೆ ಪುನಃ ನಾನು ಇಲ್ಲಿ ಹೆಚ್ಚಿಗೆ ಚರ್ಚೆ ಮಾಡಲು ಬಯಸುವುದಿಲ್ಲ. ಒಂದೇ ಒಂದು ವಿಷಯವನ್ನು ಸರ್ಕಾರಕ್ಕೆ ಸೂಕ್ಷ್ಮವಾಗಿ ತಿಳಿಸುವುದಕ್ಕೆ ಇಷ್ಟಪಡುತ್ತೇನೆ ಅದನ್ನು ಮಾನ್ಯ ಮುಖ್ಯಮಂತ್ರಿಗಳವರು ಇಲ್ಲಿಯೇ ಕುಳಿತಿರುವುದರಿಂದ ಅವರು ಕಿವಿಗೆ ಹಾಕಿಕೊಂಡರೆ ಸಾಕು ಅವರು ಇದಕ್ಕೆ ಉತ್ತರ ಕೊಡದಿದ್ದರೂ ಪರವಾಗಿಲ್ಲ; ಅವರಿಗೆ ಈ ಕಾವೇರಿ ನದಿ ನೀರಿನ ಹಂಚಿಕೆಯ ಬಗ್ಗೆ ಒಂದು ಮಾತನ್ನು ಮಾತ್ರ ನೆನಪು ಮಾಡಿಕೊಟ್ಟು ನನ್ನ ಮಾತನ್ನು ಮುಗಿಸುವುದಕ್ಕೆ ಇಷ್ಟಪಡುತ್ತೇನೆ ತಮ್ಮ ನೆನಪಿಗೆ ತರತಕ್ಕಂಥಾದ್ದು ಏನೆಂದರೆ ನಮ್ಮ ಅವಶ್ಯಕತೆ ಏನಿದೆ ಅದಕ್ಕೆ ಯಾವುದೇ ಕಾರಣದಿಂದ ತೊಂದರೆಯಾಗದ ರೀತಿಯಲ್ಲಿ. ನಾವು ಕಷ್ಟಕಾಲದಲ್ಲಿರತಕ್ಕಂಥ ಕಾಲದಲ್ಲಿ ಕೆಳಗಿನ ರಾಜ್ಯದವರು 2-3 ಬೆಳೆ ಬೆಳೆಯುತಕ್ಕಂಥ ರೀತಿಯಲ್ಲಿ ಏರ್ಪಾಡು ಮಾಡಿ ನಮಗೆ ತೊಂದರೆಯಾಗದ ರೀತಿಯಲ್ಲಿ ಇದನ್ನು ಬಗೆಹರಿಸಬೇಕು ಎನ್ನುವುದನ್ನು ಮಾತ್ರ ಹೇಳುವುದಕ್ಕೆ ಇಷ್ಟಪಡುತ್ತೇನೆ. ಮತ್ತೆ ಇನ್ನೊಂದು ಮಾತು ನನ್ನ ಕಿವಿಗೆ ಬಿತ್ತು ಅದನ್ನು ಕೂಡ ನಾನು ಇಲ್ಲಿ ಹೇಳಬಯಸುತ್ತೇನೆ ಅದು ಏನೆಂದರೆ ನಮ್ಮ ರಾಜ್ಯದಲ್ಲಿ ಕಾವೇರಿ ಜಲಾನಯನ ಪ್ರದೇಶದಲ್ಲಿ ಏನೇನು ಕಟ್ಟೆಗಳನ್ನು ಕಟ್ಟಿದ್ದೇವೋ ಆದೆಲ್ಲವನ್ನೂ ಮತ್ತು ಹಳೆಯ ಕಟ್ಟೆಗಳೆಲ್ಲರತಕ್ಕಂಥ 175 ಟಿ.ಎಂ.ಸಿ.ಎಫ್.ಟಿ. ಬಿಟ್ಟರೆ, ಇನ್ನು ಕೇವಲ 81 ಟಿ.ಎಂ.ಸಿ.ಎಫ್.ಟಿ. ಯಷ್ಟು ವಾಟರ್‌ನ್ನು ಮಾತ್ರ ಉಪಯೋಗಿಸಬಹುದೆಂದು ಕೇಂದ್ರದಿಂದ ಸೂಚನೆ ಬಂದಿದೆ ಎನ್ನುವುದು ನಮಗೆ ತಿಳಿದು ಬಂದಿದೆ ಆದು ಸುಳ್ಳು ಆಗಲಿ ಎಂದು ಅಪೇಕ್ಷಿಸುತ್ತೇನೆ. ಇದಕ್ಕೆ ನಾನು ಮುಖ್ಯಮಂತ್ರಿಗಳಿಂದ ಉತ್ತರ ಬಯಸದೇ ಇದ್ದರು, ಅವರು ಹಿಂದೆ ಹೇಳಿದ ಭರವಸೆಯನ್ನು ನೆನಪಿಗೆ ಮಾತ್ರ ತಂದು ಕೂಡಲು ಇಷ್ಟಪಡುತ್ತೇನೆ.

SRI H. M. CHANNABASAPPA.—I would Appeal to the hon'ble Member and other Members of this House also that this is a delicate matter. It is best if we don't make any comments.

SRI H. D. DEVE GOWDA,—The Hon'ble Chief Minister is here. It is his portfolio and he is capable enough to reply.

SRI H. M. CHANNABASAPPA —As a Member of this House and a Member of the Cabinet, well, I have every right to make an appeal and it is for you to hear or not.

SRI H. D. DEVE GOWDA.—The Hon'ble Chief Minister is here I request him to answer.

SRI H. M. CHANNABASAPPA.—Even his presence does not present me to make an appeal.

SRI D. DEVARAJ URS.—He is merely requesting the Members. He is not answering...

ಶ್ರೀ ಎಚ್. ಎನ್. ನಂಜೇಗೌಡ.—ಆದುದರಿಂದ ತಾವು ಇದೆಲ್ಲವನ್ನೂ ಗಮನದಲ್ಲಿಟ್ಟುಕೊಂಡು ಯಾವುದೇ ರೀತಿಯಲ್ಲಿ ನಮ್ಮ ರಾಜ್ಯಕ್ಕೆ ತೊಂದರೆಯಾಗದ ರೀತಿಯಲ್ಲಿ ನೋಡಿಕೊಳ್ಳಬೇಕೆಂದು ಇಷ್ಟು ಹೇಳಿ, ಇಷ್ಟೂ ಹೊತ್ತು ಮಾತನಾಡಲು ಅವಕಾಶ ಕೊಟ್ಟಂಥ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಕೆ. ಎಂ. ರುದ್ರಪ್ಪ (ಸಕಲೇಶಪುರ).—ಸನ್ಮಾನ್ಯ ಸಭಾಧ್ಯಕ್ಷಣಿಯವರೇ, ಕರ್ನಾಟಕ ವಿಧಾನಮಂಡಲಗಳನ್ನುದ್ದೇಶಿಸಿ ರಾಜ್ಯಪಾಲರು ಮಾಡಿದ ಭಾಷಣದ ವಂದನಾ ನಿರ್ಣಯವನ್ನು ವಿರೋಧಿಸಿ ಕೆಲವು ಮಾತುಗಳನ್ನು ಆಡಬೇಕೆಂದು ನಾನು ಬಯಸುತ್ತೇನೆ. ಕಳೆದ ಮಾರ್ಚ್

ತಿಂಗಳಲ್ಲಿ ಲೋಕಸಭೆಯ ಚುನಾವಣೆ ನಡೆಯಿತು. ಆ ಚುನಾವಣೆಯಲ್ಲಿ ಕಾಂಗ್ರೆಸ್ ಪಕ್ಷದವರು ನಾವು ಭಾರಿ ಜಯ ಗಳಿಸಿದ್ದೇವೆಂದು ಹೇಳಿದ್ದಾರೆ. 28 ಸ್ಥಾನಗಳಲ್ಲಿ 26 ಸ್ಥಾನಗಳಿಂದ ಆಯ್ಕೆ ಹೊಂದಿದ್ದೇವೆಂದು ಹೇಳಿದ್ದಾರೆ ನಿಜ. 1971 ರಷ್ಟು ಚುನಾವಣೆಯನ್ನು ತಾವು ನೋಡಿದರೆ ಆಗ ಕಾಂಗ್ರೆಸ್‌ಗೆ ಶೇಕಡಾವಾರು ಓಟು ಎಷ್ಟು ಬಂದಿತ್ತು ಈಗ ಎಷ್ಟು ಇಳಿಮುಖವಾಗಿದೆ ಎಂಬುದನ್ನು ತಾವು ನೋಡಬೇಕು ಅದು ಶೇಕಡ 17ಕ್ಕೆ ಇಳಿಮುಖವಾಗಿದೆ. ಇದು ಏನುತೋರಿಸುತ್ತದೆಂದರೆ ಸರ್ಕಾರದವರಿಂದ ಜನರುಏನು ನಿರೀಕ್ಷಣೆ ಮಾಡಿದ್ದರೋ ಆ ನಿರೀಕ್ಷಣೆಯು ಮಟ್ಟದಲ್ಲಿ ಕೆಲಸ ಮಾಡಿಲ್ಲ ಎಂಬುದು ವ್ಯಕ್ತವಾಗುತ್ತದೆ. ಇದನ್ನು ಕಾಂಗ್ರೆಸ್ ಸರ್ಕಾರದವರು ಒಪ್ಪಿಕೊಳ್ಳಲೇ ಬೇಕೆಂದು ಈ ಸಮಯದಲ್ಲಿ ಹೇಳಬಯಸುತ್ತೇನೆ

ಆ ಮೇಲೆ 25 ಅಂಶಗಳ ಕಾರ್ಯಕ್ರಮದ ವಿಚಾರದಲ್ಲಿ ಮಾನ್ಯ ರಾಜ್ಯಪಾಲರ ಭಾಷಣದಲ್ಲಿ ಉಲ್ಲೇಖವಿದೆ. ಕೇಂದ್ರ ಸರ್ಕಾರದವರಿಂದ 20 ಅಂಶದ ಕಾರ್ಯಕ್ರಮ ಮಾತ್ರ ಅಧಿಕೃತವಾಗಿ ಬಂದಿದ್ದು, ಇಲ್ಲಿ ನಾವು ರಾಜ್ಯಪಾಲರ ಭಾಷಣದಲ್ಲಿ ನೋಡಿದರೆ ಅದು 25 ಪಾಯಿಂಟ್ ಆಗಿದೆ. ಇನ್ನು 5 ಪಾಯಿಂಟ್ಸ್‌ಗಳು ಯಾವುದು ಎನ್ನುವುದನ್ನು ಯೋಚನೆ ಮಾಡಬೇಕು ಇದನ್ನು ಕಾಂಗ್ರೆಸ್ ಸರ್ಕಾರದವರು ಕೂಡ ವಿಚಾರ ಮಾಡಿ ಈ ತಪ್ಪನ್ನು ಅವರು ಒಪ್ಪಿಕೊಳ್ಳಲೇಬೇಕು. ಅದು ಶ್ರೀಮತಿ ಇಂದಿರಾಗಾಂಧಿಯವರ ಪುತ್ರ ಶ್ರೀ ಸಂಜಯಗಾಂಧಿಯವರು ಹಾಕಿದಂತ 5 ನೇ ಪಾಯಿಂಟ್ ಕಾರ್ಯಕ್ರಮ ಅದು ಅಧಿಕೃತವಲ್ಲ. ಆ 5 ಪಾಯಿಂಟ್ಸ್‌ಗಳನ್ನೂ ಕೂಡ ಸೇರಿಸಿ ಮಾನ್ಯ ರಾಜ್ಯಪಾಲರು ತಮ್ಮ ಭಾಷಣದಲ್ಲಿ 25 ಪಾಯಿಂಟ್ಸ್ ಎಕನಾಮಿಕ್ ಪ್ರೋಗ್ರಾಂ ಎಂದು ಅವರು ಉಲ್ಲೇಖ ಮಾಡಿರುವುದು ಸೂಕ್ತವಲ್ಲ ಇದು ಬಹಳ ವಿಶಾದದ ಸಂಗತಿ. ಇದು ಏನು ತೋರಿಸುತ್ತದೆ ಎಂದರೆ ಸರ್ಕಾರದ ಅಡಳಿತದಲ್ಲಿ ಯಾವ ಅಧಿಕಾರ ಸ್ಥಾನದಲ್ಲಿ ಇಲ್ಲಿದೇ ಇರತಕ್ಕಂಥವರು ಪ್ರವೇಶಿಸಿ ಒಂದು ಗೊಂದಲವನ್ನು ಎಬ್ಬಿಸಿ ದೇಶದಲ್ಲಿ ಒಂದು ದೊಡ್ಡ ಗೊಂದಲವಾಯ ವಾತಾವರಣವನ್ನು ಉಂಟು ಮಾಡಿದ್ದರು. ಇದರಿಂದ ದೇಶಕ್ಕಾಗಲೀ, ರಾಜ್ಯಕ್ಕೇ ಆಗಲೀ ಶೋಭೆ ತರತಕ್ಕಂಥಾದ್ದು ಅಲ್ಲ, ಇದು ನಾಚಿಕೆಗೇಡಿನ ವಿಚಾರವೆಂದು ಒಪ್ಪಲೇಬೇಕು.

ಆಮೇಲೆ ಇನ್ನೊಂದು ದೊಡ್ಡ ವಿಚಾರವೇನೆಂದರೆ, ಶ್ರೀ ಹಾವನೂರ್ ಕಮೀಷನ್ ಅಪಾಯಿಂಟ್‌ಮೆಂಟ್ ಮಾಡಿದರು, ಹಿಂದುಳಿದವರನ್ನು ಮುಂದಕ್ಕೆ ತರಬೇಕು ಎನ್ನುವ ಬಗ್ಗೆ ಯಾರಿಗೂ ವಿರೋಧವಿಲ್ಲ, ಅದನ್ನು ನಾವೆಲ್ಲರೂ ಸ್ವಾಗತ ಮಾಡಿದ್ದೆವು. ನಾನು ಶೆಡ್ಯೂಲ್ಡ್ ಕಾಸ್ಟ್ ಮತ್ತು ಹಿಂದುಳಿದವರೂ ಕೂಡ ಎಲ್ಲಾ ರಂಗದಲ್ಲೂ ಮುಂದುವರಿಯಬೇಕು. ಆದರೆ ಕಾಂಗ್ರೆಸ್ ಸರ್ಕಾರದವರು ಹಾವನೂರ್ ಕಮೀಷನ್ ರಿಪೋರ್ಟ್‌ನ್ನು ಈ ಅಸೆಂಬ್ಲಿಯಲ್ಲಿ ಪ್ರಸ್ತಾಪ ಮಾಡಲಿಲ್ಲ, ಎರಡನೆಯದು ಏನೆಂದರೆ ಸರ್ಕಾರದವರು ಚುನಾವಣೆಯ ಕಾಲದಲ್ಲಿ ಒಂದು ಹೆಚ್ಚಿನ ರೀತಿಯಲ್ಲಿ ಮಾಪಾರ್ಡು ಮಾಡಿ ಅದನ್ನು ತಂದರು ಎಂದು ನಾನು ಹೇಳುತ್ತೇನೆ. ಅದಕ್ಕೆ ಒಂದು ರೀತಿಯ ಚುನಾವಣಾ ಭ್ರಷ್ಟಾಚಾರ ಎನ್ನುವುದನ್ನು ಎಲ್ಲರೂ ಒಪ್ಪಿಕೊಳ್ಳಲೇ ಬೇಕು. ಹಿಂದುಳಿದವರನ್ನು ಮುಂದಕ್ಕೆ ತರಬೇಕಾದರೆ ಅದಕ್ಕೆ ಅನೇಕ ವಿಧಾನಗಳಿವೆ, ಬರೀ ಜಾತಿಯ ಆಧಾರದ ಮೇಲೆ ಅವರನ್ನು ಮುಂದಕ್ಕೆ ತರುವುದಕ್ಕೆ ಆಗುವುದಿಲ್ಲ, ಜಾತಿ ಆಧಾರದ ಮೇಲೆ ಮಾಡಲೇಬಾರದು ಎಂದು ನಮ್ಮ ಕಾನ್ಸ್‌ಟಿಟ್ಯೂಷನ್‌ನಲ್ಲಿಯೂ ಕೂಡ ಇದೆ.

ಶ್ರೀ ಕೆ. ಹೆಚ್. ರಂಗನಾಥ್. — ಸುಪ್ರೀಂ ಕೋರ್ಟ್ ಕೇಸಿನಲ್ಲಿ, caste is also taken into consideration while determining the backwardness. ಎಂದು ಹೇಳಿ ಮೊನ್ನೆ ತೀರ್ಮಾನ ಕೊಟ್ಟಿರುವುದರಿಂದ ಆದರ ಆಧಾರದ ಮೇಲೆ ಅದನ್ನು ಮಾಡಿರತಕ್ಕಂಥದ್ದು.

ಶ್ರೀ ಕೆ. ಎಂ ರುದ್ರಪ್ಪ — ಸುಪ್ರೀಂ ಕೋರ್ಟಿನ ಆಧಾರಕ್ಕಿಂತ ಮುಂದೆ ಹೋಗಿ ತಾವು ಹಾಕಿದ್ದೀರಿ, ಬಾಲಾಜಿ ಕೇಸಿನಲ್ಲಿ ....

ಶ್ರೀ ಕೆ. ಹೆಚ್. ರಂಗನಾಥ್. — ಈಗ ನಾನತ್ ಸದಸ್ಯರಾಗಿರುವ ಶ್ರೀಮಾನ್ ಕೆ. ಎಸ್. ಹೆಗಡೆಯವರು ಸುಪ್ರೀಂ ಕೋರ್ಟಿನಲ್ಲಿ ನ್ಯಾಯಾಧೀಶರಾಗಿದ್ದಾಗ ಕೊಟ್ಟ ತೀರ್ಪಿನಲ್ಲಿ : Caste should also be taken into consideration while determining the backwardness. ಎಂದು ಹೇಳಿದ್ದಾರೆ. So some of the castes will have to be taken into consideration.

SRI K. M. RUDRAPPA —That is one of the factors. ಆದರೆ, ಸುಪ್ರೀಂ ಕೋರ್ಟ್ ತೀರ್ಪಿನ ಸ್ಪಿರಿಟ್ ವಿರುದ್ಧವಾಗಿ ಕೆಲಸ ಮಾಡಿದ್ದೀರಿ ಎನ್ನುವುದು ನನ್ನ ವಾದ. ಮುನಿಶ್ಯಾಮಿನರು, ಕ್ರಿಶ್ಚಿಯನ್ನರು ಮತ್ತು ಹಿಂದುಗಳು ಮತ್ತು ಹಿಂದುಗಳಲ್ಲಿರುವ ಜಾತಿಗಳ ಜನ ಸಂಖ್ಯೆಯನ್ನು ಪ್ರಯತ್ನ ಪೂರ್ವಕವಾಗಿ ಕಂಡುಹಿಡಿಯಬಹುದು. ಆದರೆ ಹಿಂದುಗಳಲ್ಲಿ ಯಾವ ಯಾವ ಜಾತಿಯವರು ಎಷ್ಟೆಷ್ಟು ಜನ ಅಧಿಕಾರದಲ್ಲಿದ್ದಾರೆ ; ಎಷ್ಟು ಜನರಿಲ್ಲ ಎನ್ನುವುದನ್ನು ಪತ್ತೆ ಮಾಡುವುದಕ್ಕಾಗುವುದಿಲ್ಲ. ಸುಪ್ರೀಂ ಕೋರ್ಟ್ ತೀರ್ಪನ್ನು ಅನುಸರಿಸಿ ನೋಡುವುದಾದರೆ. ಈ ಸರ್ಕಾರದವರು ಮಾಡಿರುವ ಆಜ್ಞೆ ಇವತ್ತಿಗೆ ವಿರುದ್ಧವಾಗಿದೆ ಎಂದು ಹೇಳಬೇಕಾಗಿದೆ. Caste should also be taken into consideration ಎಂದು ಅವರು ಹೇಳಿದ್ದರೆ, ಜಾತಿ ಒಂದೇ ಆಧಾರದ ಮೇಲೆ ಪಟ್ಟಿ ಮಾಡುವುದು ಸರಿಯಲ್ಲ ಅನ್ನುದರಿಂದ, ಈ ವರದಿಯನ್ನು ಪುನರ್ ಪರಿಶೀಲಿಸಬೇಕಾಗಿರುವುದಲ್ಲದೆ, ಅದನ್ನು ವಿಧಾನ ಸಭೆಯ ಮುಂದೆ ಚರ್ಚೆಗೆ ತರಬೇಕೆಂದು ಮಾನ್ಯ ಮುಖ್ಯ ಮಂತ್ರಿಗಳಲ್ಲಿ ವಿನಂತಿಸಿಕೊಳ್ಳುತ್ತೇನೆ.

ಹಿಂದುಳಿದವರನ್ನು ಮುಂದಕ್ಕೆ ತರಬೇಕೆನ್ನುವ ಪ್ರಯತ್ನದಲ್ಲಿ, ನನಗೆ ಗೊತ್ತಿರುವಂತೆ, ಕೇಂದ್ರ ಸರ್ಕಾರವಾಗಲೀ ಅಥವಾ ಬೇರೆ ಇತರ ರಾಜ್ಯ ಸರ್ಕಾರಗಳಾಗಲೀ ಜಾತಿ ಆಧಾರದ ಮೇಲೆ ಪಟ್ಟಿ ಮಾಡಿಲ್ಲ ; ಮತ್ತು ಹಾಗೆಂದು ಹಿಂದುಳಿದವರನ್ನು ಗುರುತಿಸಿಯೂ ಇಲ್ಲ. ಹಿಂದುಳಿದ ವರನ್ನು ಗುರುತಿಸಲು, ಅವರ ಆರ್ಥಿಕ ಸಾಮಾಜಿಕ ಸ್ಥಿತಿಗತಿಗಳನ್ನು ಪರಿಗಣನೆಗೆ ತೆಗೆದುಕೊಳ್ಳಬೇಕು. ಹೀಗೆ ಮಾಡಿದರೆ ಮಾತ್ರ, ಇದು ಜಾತ್ಯಾತೀತ ರಾಜ್ಯಾಂಗನುಗುಣವಾಗಿರುತ್ತದೆ. ಅದು ಬಿಟ್ಟು, ನಾವು ಹೀಗೆ ಜಾತಿ ಆಧಾರದ ಮೇಲೆ ಹಿಂದುಳಿದವರನ್ನು ಗುರುತಿಸಿ, ಜಾತೀಯತೆ ಬೆಳೆಸುತ್ತಾ ಹೋದರೆ, ಇದಕ್ಕೆ ಕೊನೆ ಮೊದಲಿಲ್ಲ ಎನ್ನುವುದನ್ನು ಅರ್ಥ ಮಾಡಿಕೊಳ್ಳಬೇಕ . ನಮ್ಮ ರಾಜ್ಯಾಂಗದಲ್ಲಿ ಜಾತ್ಯಾತೀತ ರಾಷ್ಟ್ರ ಎಂದು ಇರುವಾಗ, ನಾವು ಅವಶ್ಯ ಮಟ್ಟಿಗೆ ಜಾತೀಯತೆಯನ್ನು ನಿರ್ಮೂಲನೆ ಮಾಡಬೇಕಾಗಿದೆ.

ಶ್ರೀ ವಿ. ಎನ್. ಶಾಟಿರ್.- ಅಸ್ಪೃಶ್ಯತೆ ಹಿಂದುಳಿದಿರುವುದಕ್ಕೆ ಕಾರಣವೋ ಅಥವಾ ಜಾತಿ ಕಾರಣವೋ ?

ಶ್ರೀ ಕೆ. ಎಂ. ರುದ್ರಪ್ಪ.—ಅಸ್ಪೃಶ್ಯರೆನ್ನುವವರಿಗೆ ಸರ್ಕಾರದ ಕೆಲಸಗಳಲ್ಲಿ 18 ಪರ್ಸೆಂಟ್ ಕಾದಿರಿಸಿದ್ದಾರೆ ; ಮತ್ತಿತರ ಅನುಕೂಲಗಳನ್ನು ಕಲ್ಪಿಸಿಕೊಟ್ಟಿದ್ದಾರೆ. ಆದರೆ, ನಾನು ಹೇಳುತ್ತಿರುವುದು ಆ ದೃಷ್ಟಿಯಿಂದಲ್ಲ. ಜಾತಿ ಹೆಸರಿನಲ್ಲಿ ಕೆಲವು ಮನೆತನದವರು ಮುಂದಕ್ಕೆ ಬರುವುದಕ್ಕೆ ಅವಕಾಶವಿದೆ, ಈ ದೃಷ್ಟಿಯಿಂದ ಇದು ಸರಿಯಾದ ವ್ಯವಸ್ಥೆಯಲ್ಲ ಎಂದು ನಾನು ಹೇಳುತ್ತಿರುವುದು.

ಶ್ರೀ ಎಸ್". ಬಂಗಾರಪ್ಪ —ಜಾತಿ ಆಧಾರದ ಮೇಲೆ ಸರ್ಕಾರಿ ಹುದ್ದೆಗಳನ್ನು ಕಾಯ್ದಿರಿಸುತ್ತಾ ಹೋದರೆ, ಆ ಜಾತಿಗಳೇ ಮುಂದೆ ಬರುತ್ತವೆ ಎಂದು ತಮ್ಮ ಅರ್ಥವೆ ? ಹಾಗಿದ್ದರೆ,, ಸರ್ಕಾರಿ ಹುದ್ದೆಗಳನ್ನು ಹಿಂದುಳಿದವರಿಗೆ ಕಾಯ್ದಿರಿಸದಿದ್ದರೆ, ಹಿಂದುಳಿದವರು ಇನ್ನಷ್ಟು ಹಿಂದುಳಿಯುವುದು ಸಾಧ್ಯವಿತ್ತಲ್ಲವೆ ?

ಶ್ರೀ ಕೆ. ಎಸ್. ರುದ್ರಪ್ಪ.—ಹಿಂದುಳಿದವರನ್ನು ಗುರುತಿಸುವಾಗ, ಅವರ ಆರ್ಥಿಕ ಸಾಮಾಜಿಕ ಸ್ಥಿತಿಗತಿಗಳನ್ನು ಪರಿಗಣನೆಗೆ ತೆಗೆದುಕೊಳ್ಳಬೇಕು. ಕೇವಲ ಜಾತಿಯೊಂದನ್ನೇ ಆಧಾರವಾಗಿಟ್ಟು ಕೊಂಡಲ್ಲ, ಅದು ದಕ್ಷತೆಗೆ ಕುಂದು ಬರುತ್ತದೆ ಮತ್ತು ರಾಷ್ಟ್ರೀಯ ಭಾವನೆಗೆ ದೊಡ್ಡ ಕುತ್ತು ಆಗುತ್ತದೆ ಎಂದು ಹೇಳುತ್ತೇನೆ. ಇದು ಜಾತ್ಯಾತೀತ ತತ್ವಕ್ಕೆ ಕುತ್ತಾರಪ್ರಾಯವಾಗಿದೆ ಎಂದು ಹೇಳಬೇಕಾಗಿದೆ. ಹಿಂದುಳಿದವರನ್ನು ಮುಂದಕ್ಕೆ ತರಲು ಜಾತಿಯೊಂದೇ ಆಧಾರವಾಗಿಟ್ಟು ಕೊಳ್ಳಕೂಡದು ಹೀಗೆ ಮಾಡುವುದರಿಂದ, ಕೋಟ್ಯಾನುಕೋಟಿ ಜನರಿಗೆ ಅನುಕೂಲವಾಗುವುದಿಲ್ಲ ಎನ್ನುವುದನ್ನು ಸರ್ಕಾರದವರು ಗಮನದಲ್ಲಿಟ್ಟುಕೊಳ್ಳಬೇಕೆಂದು ಹೇಳುತ್ತೇನೆ.

ಸರ್ಕಾರದವರು, ತಮ್ಮ ಸಾಧನೆಯನ್ನು ಬಹಳ ದೊಡ್ಡದಾಗಿ ಹೇಳಿಕ್ಕಾಗಿ. ಈ ಸಾಧನೆಯ ವಿಚಾರದಲ್ಲಿ ಶ್ರೀಮಾನ್ ನಂಜೇಗೌಡರು ಅನೇಕ ಲೋಪದೋಷಗಳನ್ನು ಮನದಟ್ಟಾಗುವಂತೆ ವಿವರಿಸಿದ್ದಾರೆ. ಆದುದರಿಂದ, ನಾನು ಇದರ ಬಗ್ಗೆ ಹೆಚ್ಚಿಗೆ ಹೇಳುವುದಕ್ಕೆ ಬಯಸುವುದಿಲ್ಲ. ಈ ಸಾಧನೆಯನ್ನು ಗಮನಿಸಿದರೆ, ಕರ್ನಾಟಕ ರಾಜ್ಯ ಬಹಳ ಮುಂದುವರಿದಿದೆ, ಮಾದರಿ ರಾಜ್ಯ ವಾಗಿದೆ ಎಂದು ತಿಳಿದುಕೊಳ್ಳುತ್ತೇವೆ. ಆದರೆ ವಾಸ್ತವವಾಗಿ ಹಾಗಿಲ್ಲ. ಅವರೆ, ಇಂದು

ಶಾಸಕಾಂಗ, ನ್ಯಾಯಾಂಗ ಮತ್ತು ಕಾರ್ಯಾಂಗಗಳು ಯಾವ ರೀತಿ ಕೆಲಸ ಮಾಡುತ್ತಿದೆ ಎಂದು ನೋಡಿದರೆ, ಬಹುಶಃ ಪ್ರಜಾಪ್ರಭುತ್ವಕ್ಕೆ ಊನ ಬಂದಿದೆಯೋ ಏನೋ ಎನ್ನುವಂತಾಗಿದೆ. ಇತರ ಎಲ್ಲ ರಾಜ್ಯಗಳಲ್ಲೂ ಕಾರ್ಯಾಂಗ, ಶಾಸಕಾಂಗ ಮತ್ತು ನ್ಯಾಯಾಂಗಗಳು ಪ್ರತ್ಯೇಕವಾಗಿವೆ ಆದರೆ, ಇಲ್ಲಿ ಮಾತ್ರ ಶಾಸಕಾಂಗ ಇನ್ನೂ ಪ್ರತ್ಯೇಕವಾಗಿಲ್ಲ ಎಂದು ಬಹಳ ವಿಷಾದದಿಂದ ಹೇಳಬೇಕಾಗಿದೆ ಇಲ್ಲಿ ಶಾಸಕಾಂಗ ಡಿಪಾರ್ಟ್‌ಮೆಂಟ್‌ನ ಒಂದು ವಿಂಗ್ ಮಾಡಿಕೊಂಡಿದ್ದಾರೆ. ಆದರೆ, ಸರ್ಕಾರದವರು ಮಾತ್ರ ನಾವು ಪ್ರಗತಿಯನ್ನು ಸಾಧಿಸಿದ್ದೇವೆ ಎಂದು ಹೇಳಿದ್ದಾರೆ. ನ್ಯಾಯಾಂಗದಲ್ಲಿ, ಯಾರಾದರೂ ಒಬ್ಬ ನ್ಯಾಯಾಧೀಶರು ಸರ್ಕಾರದ ವಿರುದ್ಧವಾಗಿ ತೀರ್ಪು ಕೊಡದಿದ್ದರೆ, ಅಂತಹವರನ್ನು ವರ್ಗ ಮಾಡುತ್ತಿದ್ದಾರೆ. ಇದು ನ್ಯಾಯಾಂಗಕ್ಕೆ ಅಪಮಾನ ಮಾಡಿದಂತಾಗಿರುವುದಲ್ಲದೆ, ಶಾಸಕಾಂಗಕ್ಕೂ ತೀರ ಅಪಮಾನ, ನಾನು ಅನೇಕ ರಾಜ್ಯಗಳ ವರದಿಗಳನ್ನು ತರಿಸಿಕೊಂಡು ನೋಡಿದ್ದೇನೆ, ಅಲ್ಲೆಲ್ಲಾ ಶಾಸಕಾಂಗ ಸಂಪೂರ್ಣವಾಗಿ ಪ್ರತ್ಯೇಕವಾಗಿದೆ. ಈ ಬಗ್ಗೆ ನಮ್ಮ ರಾಜ್ಯದಲ್ಲಿ ಒಂದು ಸಮಿತಿಯನ್ನು ನೇಮಕ ಮಾಡಿದ್ದರು. ಅದರಲ್ಲಿ ಶ್ರೀಮಾನ್ ನಂಜೇಗೌಡರೂ ಸಹ ಇದ್ದರು ನಾನು ಸಹ ಇದ್ದೆ. ವಿಧಾನ ಮಂಡಲದ ಕಾರ್ಯಲಯವನ್ನು ಸರ್ಕಾರದ ಕಾರ್ಯಾಂಗದಿಂದ ಪ್ರತ್ಯೇಕವಾಗಿಡಬೇಕೆಂದು ಆ ಸಮಿತಿಯವರು ಒಂದು ವರದಿಯನ್ನು ಕೊಟ್ಟರು. ನಟಿವ ಶ್ರೀ ಎಸ್ ಎಂ ಕೃಷ್ಣ ಅವರು ಶಾಸಕಾಂಗವನ್ನು ಪ್ರತ್ಯೇಕ ಮಾಡಲು ಅವಕಾಶ ಮಾಡಿಕೊಡುತ್ತೇವೆ ಎಂದೂ ಸಹ ಹೇಳಿದ್ದರು. ಆದರೆ, ಅವರು ಕೊಟ್ಟ ಆಶ್ವಾಸನೆ ಇನ್ನೂ ಹಾಗೆಯೇ ಇವೆ, ಅದಿನ್ನೂ ಕಾರ್ಯಗತವಾಗಿಲ್ಲ. ನಮ್ಮ ರಾಜ್ಯದಲ್ಲಿ ಎಷ್ಟೋ ಪ್ರಗತಿಯನ್ನು ಸಾಧಿಸಿದ್ದೇವೆಂದು ಹೇಳಿದರೂ ನಾವು ಪ್ರಜಾಪ್ರಭುತ್ವಕ್ಕನುಗುಣವಾಗಿ ಕೆಲಸ ಮಾಡುತ್ತಾ ಇಲ್ಲ. ನಮ್ಮ ರಾಜ್ಯದಲ್ಲಿ ಕಾರ್ಯಾಂಗ ಬಹಳ ಪ್ರಬಲವಾಗಿದೆ. ಇದು ನಮ್ಮ ರಾಜ್ಯಕ್ಕೆ ಮರ್ಯಾದೆ ಗಾರವಗಳನ್ನು ತರುವ ವಿಷಯವಲ್ಲ. ಶಾಸಕಾಂಗದಲ್ಲಿ ಇವತ್ತಿನ ದಿವಸ ಅನೇಕ ಸಮಿತಿಗಳನ್ನು ಸರ್ಕಾರದವರು ರಚನೆ ಮಾಡುತ್ತಿದ್ದಾರೆ ಆದರೆ ಆ ಸಮಿತಿಗಳಿಗೆ ಸರ್ಕಾರದವರು ಏನು ಬೆಲೆ ಕೊಡುತ್ತಿದ್ದಾರೆ ? ಸಾರ್ವಜನಿಕ ಹಣಕಾಸು ಮತ್ತು ಸಾರ್ವಜನಿಕ ಉದ್ದಿಮೆ ಸಮಿತಿಯವರು ಕೆಲವು ಕಡೆಗಳಲ್ಲಿ ಭ್ರಷ್ಟಾಚಾರ ನಡೆದಿದೆ ಎಂದು ವರದಿ ಕೊಟ್ಟಿದ್ದಾರೆ. ಸಾರ್ವಜನಿಕ ಹಣಕಾಸು ಸಮಿತಿಯಲ್ಲಿ ಶ್ರೀಮಾನ್ ದೇವೇಗೌಡರು ಅಧ್ಯಕ್ಷರಾಗಿದ್ದಾರೆ, ಅದರಲ್ಲಿ ಹೆಚ್ಚಾಗಿ ಕಾಂಗ್ರೆಸ್ಸಿನ ಸದಸ್ಯರೇ ಇದ್ದಾರೆ, ಅವರೆಲ್ಲರೂ ಒಮ್ಮತದಿಂದ ಈ ವರದಿಯನ್ನು ಕೊಟ್ಟಿರುವಾಗ, ಅದಕ್ಕೆ ಸರ್ಕಾರದವರು ಬೆಲೆ ಕೊಡದೆ ಹೋದರೆ, ಸಮಿತಿಗಳನ್ನು ರಚಿಸುವುದರಿಂದ ಲಭ್ಯವಾಗುವ ಪ್ರಯೋಜನವಾದರೂ ಏನು ? ಕೇಂದ್ರ ಸರ್ಕಾರದವರು ಮತ್ತು ಬೇರೆ ರಾಜ್ಯ ಸರ್ಕಾರಗಳವರು ಇವನ್ನೆಲ್ಲಾ ಕಣ್ಣುಮುಚ್ಚಿ ನುಮ್ಮನಿರುತ್ತಾರೆಂದು ಯಾರೂ ತಿಳಿದುಕೊಳ್ಳಬಾರದು. ಇದು ಬಹಳ ಗಂಭೀರವಾದ ಪ್ರಶ್ನೆಯಾಗಿದೆ. ವಿಧಾನ ಮಂಡಲದ ಸಮಿತಿಗಳು ಕೊಟ್ಟಿರುವ ವರದಿಗಳ ಬಗ್ಗೆ ತನಿಖೆ ನಡೆಸಬೇಕು, ಯಾರು ದುರಾಡಳಿತ ನಡೆಸಿದ್ದಾರೆ, ಯಾರು ಹಣವನ್ನು ಅಪವ್ಯಯ ಮಾಡಿದ್ದಾರೆ-ಅವರನ್ನು ಶಿಕ್ಷೆಗೆ ಗುರಿಪಡಿಸಬೇಕು. ಇಲ್ಲದೆ ಹೋದರೆ, ವಿಧಾನ ಮಂಡಲದ ಸಮಿತಿಗಳಿಗೆ ಬೆಲೆ ಇರುವುದಿಲ್ಲ. ಈ ಮಾತನ್ನು ನಾನು ಬಹಳ ವ್ಯಥೆಯಿಂದ ಹೇಳುತ್ತಿದ್ದೇನೆ.

1973ರಲ್ಲಿ ಮಾನ್ಯ ಮುಖ್ಯ ಮಂತ್ರಿಗಳು ಲೋಕಾಯುಕ್ತ ಮತ್ತು ಉಪಲೋಕಾಯುಕ್ತ ಎನ್ನುವ ಮಸೂದೆಯೊಂದನ್ನು ಈ ಸದನದಲ್ಲಿ ಮಂಡಿಸಿದ್ದರು. ಅದು ಜಾಯಿಂಟ್ ಸೆಲೆಕ್ಟ್ ಕಮಿಟಿಗೂ ಹೋಗಿತ್ತು. ರಾಜ್ಯದಲ್ಲಿ ಸ್ಟ್ಯಾಂಡರ್ಡ್ ಆಫ್ ಪಬ್ಲಿಕ್ ಅಡ್ಮಿನಿಸ್ಟ್ರೇಷನ್ ಇಂಪ್ರೂವ್ ಮಾಡುವುದೇ ಈ ಮಸೂದೆಯ ಉದ್ದೇಶವೆಂದು ಮಾನ್ಯ ಮುಖ್ಯ ಮಂತ್ರಿಗಳು ಆ ಮಸೂದೆಯನ್ನು ಮಂಡಿಸುತ್ತಾ ತಿಳಿಸಿದ್ದರು ಮಸೂದೆಯು ಆಬ್ಜೆಕ್ಟ್ಸ್ ಅಂಡ್ ರೀಸನ್ಸ್‌ನಲ್ಲೂ ಈ ವಿಷಯ ಅಡಕವಾಗಿದೆ ಈ ಮಸೂದೆಯನ್ನು ಸಭೆಯ ಮುಂದೆ ಮಂಡಿಸಿ, ಸುಮಾರು ಎರಡು-ಮೂರು ವರ್ಷಗಳಾಯಿತು. ಇಲ್ಲಿಯವರೆಗೂ ಜಾಯಿಂಟ್ ಸೆಲೆಕ್ಟ್ ಕಮಿಟಿ ರಿಪೋರ್ಟ್ ಬರಲಿಲ್ಲ, ಆ ಮಸೂದೆ ಈ ಸಭೆಯ ಮುಂದೆ ಬರಲಿಲ್ಲ ಭ್ರಷ್ಟಾಚಾರ, ದುರಾಡಳಿತ-ಇವುಗಳನ್ನೂ ನಿರ್ಮೂಲ ಮಾಡಲು ಸರ್ಕಾರಕ್ಕೆ ಮನಸ್ಸಿಲ್ಲ ಎನ್ನುವುದನ್ನು ಇದು ತೋರಿಸುತ್ತದೆ ಆ ಉದ್ದೇಶ ಇದ್ದಿದರೆ ಈ ಮಸೂದೆಯನ್ನು ತರುವುದಕ್ಕೆ ಮೂರು ವರ್ಷಗಳಕಾಲ ಬೇಕಾಗಿರಲಿಲ್ಲ, ಕೂಡಲೇ ಜಾಯಿಂಟ್‌ಸೆಲೆಕ್ಟ್ ಕಮಿಟಿ ವರದಿಯನ್ನು ತರಿಸಿಕೊಂಡು ಈ ಮಸೂದೆಯನ್ನು ಈ ಸಭೆಯಲ್ಲಿ ಮಂಡಿಸಬಹುದಾಗಿತ್ತು. ಅದೂ ಅಲ್ಲದೆ ಈ ಮಸೂದೆಯನ್ನು ಇಂಟ್ರಡ್ಯೂಸ

ಮಾಡುವ ಸಂಧರ್ಭದಲ್ಲಿ ವಿಜಿಲೆನ್ಸ್ ಕಮೀಷನ್ ಎಫೆಕ್ಟೀವ್ ಆಗಿ ಕೆಲಸ ಮಾಡುತ್ತಿಲ್ಲ, ಅದಕ್ಕೋಸ್ಕರ ಲೋಕಾಯುಕ್ತ ಮತ್ತು ಉಪ ಲೋಕಾಯುಕ್ತಗಳನ್ನು ನೇಮಕ ಮಾಡಿದ ಮೇಲೆ ವಿಜಿಲನ್ಸ್ ಕಮೀಷನ್ ಬೇಕಾಗಿಲ್ಲ ಎಂದು ಹೇಳಿದ್ದಾರೆ. ನಾನು ಇವತ್ತು ಕೇಳುತ್ತೇನೆ, ಇವತ್ತು ಈ ಸಭೆಯಲ್ಲಿ ಈ ಮಸೂದೆಯನ್ನು ಪಾಸುಮಾಡಿಸಿದ್ದರೆ ಕರಪ್ಷನ್, ನೆಪೋಟಿಸಂ, ಫೇವರಿಟೀಸಂ ತಪ್ಪಿಸಬಹುದಾಗಿತ್ತು, ಶುದ್ಧ ಆಡಳಿತವನ್ನು ಕೊಡುವ ಬಗ್ಗೆ ತಾವು ಮನಸ್ಸು ಮಾಡಿದ್ದರೆ ಈ ಮಸೂದೆಯನ್ನು ಇಲ್ಲಿ ಪಾಸ್ ಮಾಡಬಹುದಾಗಿತ್ತು, ನಿಮಗೆ ಆ ಉದ್ದೇಶ ಇದ್ದಹಾಗೆ ಕಾಣುವುದಿಲ್ಲ. ಏನೂ ಆ ರೀತಿ ಮಾಡಿದ್ದು ದೊಡ್ಡ ದೋಷ ಎಂದು ಹೇಳಬೇಕಾಗುತ್ತದೆ.

ಇನ್ನು ಬಡವರ ಹೆಸರಿನಲ್ಲಿ ಕಾನೂನುಗಳು ಆಗಿವೆ, ಶ್ರೀಮಾನ್ ನಂಜೇಗೌಡರು ಅನೇಕ ವಿಚಾರಗಳನ್ನು ಈಗಾಗಲೇ ಹೇಳಿದ್ದಾರೆ. ಉದಾಹರಣೆಗೆ ಹೇಳುವುದಾದರೆ ಭೂಸುಧಾರಣಾ ಕಾನೂನಿಂದ ವಿಧವೆಯರಿಗೆ, ಅಂಗವಿಕಲರಿಗೆ, ಅಪ್ರಾಪ್ತ ವಯಸ್ಕರಿಗೆ ಜನರಿಗೆ ತೊಂದರೆಯಾಗಿದೆ. ಬೇರೆ ರಾಜ್ಯಗಳಲ್ಲಿ ಇವರಿಗೆ ಏನಾಯಿತಿ ಕೊಟ್ಟು, ಜಮೀನು ಗೇಣಿಗೆ ಕೊಡುವುದಕ್ಕೆ ಅವಕಾಶ ಇದೆ, ಕರ್ನಾಟಕದಲ್ಲಿ ಮಾತ್ರ ಇಲ್ಲ. ಅಲ್ಲಿದೆ ಎಲ್ಲಾ ಕಡೆಗಳಲ್ಲಿಯೂ ಇರತಕ್ಕ ವೈಷಮ್ಯ, ದ್ವೇಷ ಕಡಿಮೆ ಮಾಡಿ ಭೂ ಹಿಡುವಳಿ ಶಾಸನದಲ್ಲಿ ರಾಜೀ ಮಾಡುವುದಕ್ಕೆ ಅವಕಾಶ ಇರಬೇಕೆಂದು ಒತ್ತಾಯ ಮಾಡುತ್ತೇನೆ. ಕೇರಳ ರಾಜ್ಯದಲ್ಲಿ ರಾಜಿ ಆಗುವುದಕ್ಕೆ ಅವಕಾಶ ಇದೆ; ಆಂತ ಒಂದು ವ್ಯವಸ್ಥೆ ಭೂ ಸುಧಾರಣಾ ಕಾನೂನಿನಲ್ಲಿ ಇದ್ದರೆ, ಈ ಕಾನೂನು ಬೇಗ ಜಾರಿಗೆ ಬರುವುದಕ್ಕೆ ಅವಕಾಶವಾಗುತ್ತಿತ್ತು. ಭೂ ವ್ಯಾಯಾ ಮಂಡಲಗಳ ವಿಚಾರದಲ್ಲಿ ಹೇಳುವುದಾದರೆ, ನನ್ನ ಅಭಿಪ್ರಾಯದಲ್ಲಿ ಇಂದ್ರ ರಾಜ್ಯದಲ್ಲಿ ಇರುವ ಹಾಗೆ ಖಾಸಗೀಯವರನ್ನು ತೆಗೆದು ಹಾಕಿ, ಸರ್ಕಾರಿ ಅಧಿಕಾರಿಗಳು ನ್ಯಾಯಾಲಯದ ಅಧಿಕಾರಿಗಳು ಇರುವುದು ಸೂಕ್ತ, ಶಾಸನಸಭಾ ಸದಸ್ಯರು ಇರುವುದು ಒಳ್ಳೆಯದಲ್ಲ ಎಂದು ನನ್ನ ಖಚಿತವಾದ ಅಭಿಪ್ರಾಯ.

ಇನ್ನೂ ಬಡವರಿಗೆ ಸೈಟು ಕೊಡತಕ್ಕ ವಿಚಾರದಲ್ಲಿ ಒಂದು ಮಾತು ಹೇಳುತ್ತೇನೆ. ಬಹಳ ಕಡೆ ಸೈಟುಗಳನ್ನು ಇನ್ನೂ ಕೊಟ್ಟಿಲ್ಲ, ಕೆಲವಕ್ಕೆ ಬಾರದ ಕಡೆ ಸೈಟುಗಳನ್ನು ಕೊಟ್ಟಿದ್ದಾರೆ. ಅನೇಕ ಕಡೆ ಮನೆಗಳನ್ನು ಕಟ್ಟಿಕೊಂಡಿಲ್ಲ. ಜೀತ ಪದ್ಧತಿಯ ನಿರ್ಮೂಲನ ಒಳ್ಳೆಯ ವ್ಯವಸ್ಥೆಯಾದರೂ, ಇವತ್ತಿಗೂ ಒಂದು ಬದಲಿ ವ್ಯವಸ್ಥೆ ಮಾಡಿಲ್ಲ. ಇವತ್ತು ಅವನು ಹೊಟ್ಟೆಗೆ ಇಲ್ಲದೆ ಪರದಾಡುವ ಸ್ಥಿತಿಗೆ ಬಂದಿದ್ದಾನೆ. ಬಡವರ ಹಿತವನ್ನು ಕಾಪಾಡುವ ಸರ್ಕಾರ ಲೋಪದೋಷಗಳನ್ನು ತಿದ್ದಿಕೊಳ್ಳಬೇಕು, ಏಕೆಂದರೆ, ಮುಂದೆ ಕಾಂಗ್ರೆಸ್‌ನ ಪರ್ಚಸ್ಸು ನೀವು ಮಾಡಿದ ಕೆಲಸಗಳ ಮೇಲೆ ಅಲಂಬಿತವಾಗಿದೆ, ಈ ದೇಶದಲ್ಲಿ ಮುಂದೆ ಶಾಸನಸಭಾ ಚುನಾವಣೆಗಳು ನಡೆಯುವುದರಿಂದ ಜನತೆ ಯಾವ ರೀತಿ ನಿರ್ಣಯ ಕೊಡುತ್ತಾರೋ ಎನ್ನುವ ಬಗ್ಗೆ ಅವರಿಗೆ ಮನವರಿಕೆ ಯಾಗಿದೆ. ಆ ಬಗ್ಗೆ ನಾನು ಏನು ಹೇಳುವುದಕ್ಕೂ ಹೋಗುವುದಿಲ್ಲ. ಲೋಕಸಭಾ ಚುನಾವಣೆ ಕಾಲದಲ್ಲಿ ಸ್ಥಳೀಯ ಸಮಸ್ಯೆಗಳ ವಿಚಾರ ಬರುವುದಿಲ್ಲ. ಸರ್ಕಾರದ ಲೋಪದೋಷಗಳನ್ನು ತಿದ್ದಿಕೊಂಡು ಪ್ರಜಾಪ್ರಭುತ್ವ ಒಂದು ಸರಿಯಾದ ನೆಲೆಗಟ್ಟಿನ ಮೇಲೆ ನಿಲ್ಲುವಂತ ವ್ಯವಸ್ಥೆ ಮಾಡಲೆ ಎಂದು ಹೇಳಿ, ನನಗೆ ಮಾತನಾಡಲು ಅವಕಾಶ ಕೊಟ್ಟ ಅಧ್ಯಕ್ಷರಿಗೆ ವಂದಿಸಿ, ನನ್ನ ಮಾತುಗಳನ್ನು ಮುಗಿಸುತ್ತೇನೆ.

Statement by the Chief Minister.

re : Providing Drinking Water Supply in urban area in the State

MADAM SPEAKER.—The Hon. the Chief Minister wanted to make a statement. He may do so.

SRI D. DEVARAJA URS (Chief Minister).—Madam Speaker. I wish to make the following statement.